# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. XXIV No. 11 | February 2017 | Pages 16 | **Rs. 2/-**





| | |
|---|---|
| **Editorial** | 2 |
| ಸಂಸ್ಕೃತ ಸಾಹಿತ್ಯದ ಹಿರಿಮೆ – ಶೈಲಜಾ ಹೆಗಡೆ, | 3 |
| **Havyaka Youth Wing - Yashashree Akadas** | 4 |
| **Vedic Way - Uday Koppikar** | 5 |
| ರೋಚಕ ಅನುಭವದ ಪ್ರವಾಸ ಕಥನ... – ಶಾರದಾ ಎ. ಅಂಚನ್ | 6 |
| ಸಂಜಯನ ಪತ್ರ – ಸದಾನಂದ ಹೆಗಡೆಕಟ್ಟೆ | 9 |
| ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ – ವಸುಧೇಂದ್ರ | 12 |
| ಸಂಕ್ಷಿಪ್ತ ಸುದ್ದಿಗಳು | 15 |


*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T.*

"**Havyaka Sandesha**" is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina,
Vidyanagari P. O. Mumbai - 400 098 ✆ 2665 2591

***Hon. Editor*** : Smt. Amita S. Bhagwat

***Editorial Committee*** : Smt. Shashikala Hegde, Smt. Tanuja Hegde, Shri Gautam Upadhya, Smt. Uma Swamy

***Publisher*** : Narayan Akadas R.
Hon. Gen. Secretary

***Printed at*** : M/s. Navin Printers
Mumbai - 400 016.
✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN) Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page Rs. 5000/- annum Rs. 500/- one time.
½ Page Rs. 10,000/- annum Rs. 1,000/- one time
Full Page Rs.15,000/- annum Rs. 2,000/- one time
Matrimonial Rs. 500/- per Issue

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2016-2017**

***President*** : Shivkumar P. Bhagwat
***Vice - President*** : Sanjay Bhat
***Hon. Gen. Secretary*** : Narayan Akadas
***Hon. Jt. Secretary*** : Umesh Hegde
***Hon. Treasurer*** : A. G. Bhat

***Elected Members :***

| | |
|---|---|
| Smt. Tanuja Hegde | A. K. Bhat |
| Smt. Shashikala Hegde | R. N. Kameshwar |
| Gautam Upadhya | Smt. Uma Swamy |
| Keshav Hegde | Chidanand Bhagwat |
| R. M. Shastri | |

***Editorial***

# ALL THAT WE POSSESS

Once a question was asked to a learned person

"if we don't take anything with us in the final journey what do we possess at all''. His answer was "We possess this time"

We really possess the time because it is with us till our last breath. We may utilize it either to earn wealth or to build up relation; either to love or to hate; either to smile or to grumble; either to be happy or to be sad. Everything depends on us. Though time is always in motion, we are the drivers who have to decide the destination.

Most of the time, we identify ourselves with what we possess. It can be the degree that we hold, home that we own, vehicle that we drive, career that we have chosen and so on. Without our materialistic possession we can't think of our existence. In short we think we are what we own.

Surprisingly we also think that we own relations too. Soon after marriage it has to be registered and a marriage certificate is issued. The birth of a child has to be documented. It creates a legal binding and also binds us emotionally. With a supporting system, we are assured that we are not alone in this world and feel secured and happy.

Though we speak about our family values and our traditions it is very likely that we take our relations for granted. We start thinking that we possess our near and dear ones. It may also make us dominating without realizing the soft feelings of those who are close to us. Husband or wife may compel their spouse to behave in a particular way they like. Parents always see their kids through their aspirations. Can we really possess our relations? No, relations embrace understanding and caring. Relations call for respecting the feelings of others. To cherish our relations we have to take care that it is not stagnant. To keep it flowing we have to give it the most valuable thing we possess that is our time.

We may have love in our hearts but may fail to express it. We should also show that we care. Non communication creates a gap in the relation. When we expect something from others we should also consider what we expect is beyond their capacity to perform. On the other hand a small gesture of kindness and a word of appreciation may not cost much but means a lot to the one who is receiving it. All kinds of relations need nourishment. We cannot possess our relation but we have to cherish them

Valentine's Day on 14th February. 'Happy Valentine's Day' to all loving hearts.

Amita S Bhagwat

e-mail : amitabhagwat@gmail.com

*PAGE DONATED BY : **ADVOCATE M. S. PANDIT** PUNE*

# ಸಂಸ್ಕೃತ ಸಾಹಿತ್ಯದ ಹಿರಿಮೆ

✍ ಶೈಲಜಾ ಹೆಗಡೆ, ಮುಂಬಯಿ

## ‘ಗೀತಗೋವಿಂದ’

ಕವಿ ಜಯದೇವ ವಿರಚಿತ ಏಕಮೇವ ಉಪಲಬ್ಧ ಕೃತಿ ‘ಗೀತ ಗೋವಿಂದ’ ಸಂಸ್ಕೃತ ಸಾಹಿತ್ಯದ ಅನುಪಮ ಕೃತಿಗಳಲ್ಲೊಂದಾಗಿದೆ. ಕಾಳಿದಾಸನ ‘ಮೇಘದೂತ’ ಕಾವ್ಯದ ಅನಂತರ ಗೀತ ಕಾವ್ಯಗಳಲ್ಲಿ ಗೀತ ಗೋವಿಂದವು ಪ್ರಮುಖ ಸ್ಥಾನವನ್ನು ಪಡೆದುಕೊಳ್ಳುತ್ತದೆ. ರಾಧಾಕೃಷ್ಣರ ಪ್ರಣಯ, ಆಸೆ, ನಿರಾಶೆ, ಉತ್ಕಂಠೆ, ವಿಷಾದ, ಪ್ರಣಯಜನ್ಯ ಈರ್ಷ್ಯೆ ಮೊದಲಾದ ಪ್ರೇಮಿಗಳ ವಿವಿಧ ಅವಸ್ಥೆಗಳ ವರ್ಣನೆ ಇಲ್ಲಿ ಉಪಲಬ್ಧವಿದೆ. ಕೋಮಲ ಕಾಂತ ಪದಾವಲಿಗಳ ಜೋಡಣೆ, ಸ್ವರ, ಲಯ ಮತ್ತು ತಾಳಗಳ ಸಮನ್ವಯ, ಭಾವಕ್ಕೆ ತಕ್ಕ ಭಾಷಾ ಶೈಲಿ, ಸನ್ನಿವೇಶಗಳ ನಿರ್ಮಿತಿ, ಅದ್ವಿತೀಯ ಅನುಪ್ರಾಸ, ಇವು ಕಾವ್ಯದ ವೈಶಿಷ್ಟ್ಯಗಳಾಗಿವೆ. ಕಾವ್ಯವು ಹನ್ನೆರಡು ಸರ್ಗಗಳನ್ನು ಒಳಗೊಂಡಿದೆ. ಸರ್ಗಗಳನ್ನು ಪರಸ್ಪರ ಹೊಂದಿಸುವ ವರ್ಣನಾತ್ಮಕ ಪದ್ಯಗಳು ಕಥೆಯ ಸೂತ್ರವನ್ನು ವಿವರಿಸುತ್ತವೆ. ಉಪಮೆ ಮತ್ತು ಉತ್ಪ್ರೇಕ್ಷೆಗಳ ಪರಾಕಾಷ್ಠತೆಯನ್ನು ಜಯದೇವನ ಗೀತಗೋವಿಂದದಲ್ಲಿ ಕಾಣಬಹುದಾಗಿದೆ. ಉದಾ :

**‘ವಹತಿ ಚ ವಲಿತ ವಿಲೋಚನ ಜಲಭರಮಾನನ ಕಮಲಮುದಾರಮ್।**
**ವಿಧುಮಿವ ವಿಕಟ ವಿಧುಂತುದ ದಂತ ದಲನ ಗಲಿತಾಮೃತ ಧಾರಮ್॥’**

‘ವಿರಹದಿಂದ ಬಳಲುವ ರಾಧೆಯ ಕಮಲದಂತಿಹ ಎರಡೂ ಕಣ್ಣುಗಳಲ್ಲಿ ಸುರಿಯುವ ಕಣ್ಣೀರು, ರಾಹುವಿನ ಭಯಾನಕ ದವಡೆಯಲ್ಲಿ ಸಿಲುಕಿದ ಚಂದ್ರನ ಅಮೃತಧಾರೆಯಂತೆ ಕಾಣುತ್ತಿತ್ತು’ ಎಂಬುದು ಜಯದೇವನ ಅಲಂಕಾರ ಚಾತುರ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

‘ಕೋಮಲ ಪುಷ್ಪವಾಟಿಕೆಗಳಲ್ಲಿ ಭ್ರಮರಗಳ ಸಂಚಾರ, ಪರ್ವತ ಪ್ರದೇಶಗಳಿಂದ ಹಾಯ್ದು ಬರುವ ಮನೋಹರ ತಂಗಾಳಿ, ಕೋಗಿಲೆಯ ಮಧುರ ಇಂಚರ, ಸರಸ ವಸಂತದ ಸುಂದರ ಲತಾ ಮಂಟಪಗಳಲ್ಲಿ ಯುವತಿಯರೊಡಗೂಡಿ ನರ್ತಿಸುವ ಹರಿಯನ್ನು ಸಂಕೇತಿಸುವ ಕೆಳಗಿನ ಶ್ಲೋಕವು ಜಯದೇವನ ಕೋಮಲ ಕಾಂತ ಪದಬಂಧಕ್ಕೆ ದ್ಯೋತಕವಾಗಿದೆ.’

**‘ಲಲಿತಲವಂಗಲತಾಪರಿಶೀಲನ ಕೋಮಲಮಲಯಸಮೀರೇ।**
**ಮಧುಕರನಿಕರ ಕರಂಬಿತಕೋಕಿಲ ಕುಂಜನಿಕುಂಜ ಕುಟೀರೇ॥**
**ವಿಹರತಿ ಹರಿರಿಹ ಸರಸ ವಸಂತೇ।**
**ನೃತ್ಯತಿ ಯುವತಿ ಜನೇನ ಸಮಂ ಸಖಿ ವಿರಹಿಜನಸ್ಯ ದುರಂತೇ॥’**

ಜಯದೇವನ ಕಾವ್ಯದ ಛಂದಸ್ಸು ನಾದಮಯ ಸೌಂದರ್ಯಗಳಿಂದ ಕೂಡಿದೆ. ಸಮಾಸಯುಕ್ತ ಹಾಗೂ ಸಮಾಸ ರಹಿತ ಪದಗಳಿದ್ದು, ಅವುಗಳಲ್ಲಿ ಸ್ವರಮಾಧುರ್ಯ, ಪ್ರಸಾದ ಗುಣಗಳು ಹೇರಳವಾಗಿವೆ. ಶ್ಲೇಷ ಮತ್ತು ಯಮಕಗಳ ಬಳಕೆಯೂ ಅಧಿಕವಾಗಿದೆ. ರಾಧೆಯ ವಿವಿಧ ಅಂಗಗಳಲ್ಲಿ ಇಂದುಮತಿ, ಮನೋರಮಾ, ರಂಭಾ, ಕಲಾವತಿ, ಚಂದ್ರಲೇಖಾ ಮುಂತಾದ ಅಪ್ಸರೆಯರ ನಿವಾಸವನ್ನು ಶ್ಲೇಷಾಲಂಕಾರಯುಕ್ತವಾಗಿ ಬಣ್ಣಿಸಲಾಗಿದೆ. ‘ಸಂದರ್ಭ ಶುದ್ಧಿ ಗಿರಾಂಜಾನೀತೇ ಜಯದೇವ ಏವ’ ಎಂದು ಸ್ವತಃ ಜಯದೇವನು ತನ್ನ ಕಾವ್ಯವನ್ನು ಹೊಗಳಿಕೊಂಡಿದ್ದಾನೆ. ಉತ್ಕೃಷ್ಟ ಭಾಷೆಯುಳ್ಳ ಈತನ ಕಾವ್ಯವು ಅತ್ಯಂತ ಜನಪ್ರಿಯತೆಯನ್ನು ಗಳಿಸಿಕೊಂಡಿದೆ.

ಕಾವ್ಯದ ಸುಮಾರು ಮೂವತ್ತೈದು ಟೀಕೆಗಳು ಉಪಲಬ್ಧವಿವೆ. ಈ ಕಾವ್ಯವನ್ನು ಅನುಸರಿಸಿ, ‘ಅಭಿನವ ಗೀತ ಗೋವಿಂದ’, ‘ಗೀತ ರಾಘವ’, ‘ಗೀತ ಗಂಗಾಧರ’, ‘ಕೃಷ್ಣ ಗೀತ’ ಮೊದಲಾದ ಅನೇಕ ಗೀತಕಾವ್ಯಗಳು ರಚಿತವಾಗಿವೆ. ಭಾರತೇಂದು ಹರಿಶ್ಚಂದ್ರನು ಬ್ರಿಜ್ ಭಾಷೆಗೂ, ರುಕರ್ಟ್ ಎಂಬವನು ಜರ್ಮನ್ ಭಾಷೆಗೂ ಗೀತ ಗೋವಿಂದ ಕಾವ್ಯವನ್ನು ಅನುವಾದಿಸಿದ್ದಾರೆ.

ಬಂಗಾಳದ ಕಿಂದು ಬಿಲ್ವವೆಂಬ ಗ್ರಾಮವು ಜಯದೇವ ಕವಿಯ ಜನ್ಮಭೂಮಿಯಾಗಿದೆ. ತಂದೆ ಭೋಜದೇವ ಮತ್ತು ತಾಯಿ ರಾಧಾದೇವಿ. ಈತನ ಪತ್ನಿಯ ಹೆಸರು ಪದ್ಮಾವತಿ. ಜಯದೇವನು ಬಂಗಾಳದ ರಾಜ ಲಕ್ಷ್ಮಣಸೇನನ ಆಸ್ಥಾನ ಕವಿಯಾಗಿದ್ದನು. ದೊರೆತ ಶಿಲಾಲೇಖದ ಪ್ರಕಾರ ರಾಜಾ ಲಕ್ಷ್ಮಣಸೇನನ ಕಾಲವು 1116 ನೆಯ ಇಸ್ವಿಯಾಗಿದೆ. ಹಾಗಾಗಿ, ಜಯದೇವನ ಕಾಲವನ್ನು 1100 ನೆಯ ಇಸ್ವಿಯೆಂದು ನಿರ್ಣಯಿಸಲಾಗಿದೆ.

ರಾಧಾಕೃಷ್ಣರ ಪ್ರಣಯವೇ ಮೂಲಭೂತವಾಗುಳ್ಳ ಜಯದೇವನ ‘ಗೀತಗೋವಿಂದ’ ಕಾವ್ಯವನ್ನು ಹಲವು ಚಿಂತಕರು ಆಕ್ಷೇಪಿಸಿದ್ದಾರೆ. ಭಕ್ತಿಯ ಕೇಂದ್ರಬಿಂದುವಾದ ಕೃಷ್ಣ ಮತ್ತು ರಾಧೆಯರನ್ನು ಜಯದೇವನು ತನ್ನ ಕಾವ್ಯದ ನಾಯಕ-ನಾಯಕಿಯರನ್ನಾಗಿಸಿದ್ದಾನೆಂಬುದು ಆಕ್ಷೇಪದ ಸಂಗತಿಯಾಗಿದೆ. ಆದರೆ, ವಾಸ್ತವಿಕವಾಗಿ ಗೀತ ಗೋವಿಂದ ಕಾವ್ಯವು ಧಾರ್ಮಿಕ ಭಾವವುಳ್ಳ ಭಕ್ತಿ ಕಾವ್ಯವೇ ಆಗಿದೆ. ಇಲ್ಲಿ ಕೃಷ್ಣನನ್ನು ಪರಬ್ರಹ್ಮನೆಂದೂ, ಗೋಪಿಕೆಯರನ್ನು ಜೀವಾತ್ಮರೆಂದೂ ಪರಿಗಣಿಸಲಾಗಿದೆ.

ಹಾಗಾಗಿ, ರಾಧಾಕೃಷ್ಣರ ಮಿಲನವು ಬ್ರಹ್ಮಜೀವಾತ್ಮರ ಮಿಲನವೇ ಆಗಿದೆ. ನಿಜಾರ್ಥದಲ್ಲಿ ಗೋಪಿಕೆಯರೊಡನೆ ಕೃಷ್ಣನ ರಾಸಕ್ರೀಡೆಯೂ ಅಗಣಿತ ಜೀವಾತ್ಮ ಮತ್ತು ಪರಮಾತ್ಮರ ಕ್ರೀಡೆಯೇ ಆಗಿದೆ. ಕಾವ್ಯದ ಪ್ರತಿಯೊಂದು ಸನ್ನಿವೇಶಗಳೂ ವಿಶ್ವನಾಯಕನ ಲೀಲಾಮಯ ನಾಟಕದ ದ್ಯೋತಕವಾಗಿದೆ. ಹೀಗೆ ಜಯದೇವನ ಗೀತ ಗೋವಿಂದ ಕಾವ್ಯವು ಗೀತಕಾವ್ಯಗಳ ಮುಕುಟ ಮಣಿ ಎಂಬುದರಲ್ಲಿ ಸಂಶಯವಿಲ್ಲ. ಇಂದೂ ಕೂಡ ಈತನ ಜನ್ಮಸ್ಥಾನದಲ್ಲಿ ಭಕ್ತರು ಜಯಂತಿಯನ್ನು ವೈಭವದಿಂದ ಆಚರಿಸುತ್ತಾರೆ.

*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE***

# HAVYAKA YOUTH WING

✍ **Yashashree Akadas**

'Your worth is not measured in likes, comments, notes or followers; but in your ability to love, keep your comments to yourself & lead.' - Anonymous

'Writing an article for Havyaka Youth Wing at home - feeling artistic. #writer #article #havyaka #youthwing #wintertime #blahblahblah.'

Weird, isn't it? But this is what many of the people are doing almost everyhour! The endless notifications, "Have not changed my DP since ages" selfies, status updates, the importance of being updated with every gossip… so many things to do but no time.

Amidst the ocean of social media alerts, aren't we somewhere forgetting our real social life? Where there are people you can actually see, touch, talk to, without the obstruction of a screen or harm to the eyes & ears.

Why blame only the young generation? There are adults too who have newly become tech savvy & just can't resist the urge to send friend requests or follow requests to every person they find in the networking sites.

Coming to the point, we are actually losing ourselves way too much in the name of technology. There are so many people who can't even communicate properly when they talk to a person face to face. God saves us with the autocorrect when chatting (though spoils it all when trying to chat in a vernacular language) as we don't have to bear the otherwise probable innumerable spelling mistakes! This social media concept though sounds interesting & definitely is interesting as we all are into it, but it is surely also killing a part of us. That part of us, which can interact with people, which can innovate things instead of googling it up, which can remember things without reminders and so on. It's killing the writer, originator, artist, speaker, listener, teacher, learner in us.

No wonder it has made life easier, but along with the superpowers it has given us just a few clicks away, it has also taken back many things from us which we aren't even realizing.

Just remember the times when we were young & mobile, internet-free… hide & seek, Kho-Kho, floating away paper boats in puddles, get togethers where nobody was stuck to phone, the regular meets which weren't only limited to the recent chats list, the diaries we wrote without having to express ourselves by changing our status & DP, the original dance pieces we created on music without the dependency on YouTube and what not? Just can't stop if we start thinking of how lovely the life was before our marriages to social medias happened! Not denying for a percent that it is a boon for us since I am myself typing this article on laptop & not writing it up on a page, but just a thought on how much we are missing.

I strongly feel we need to travel more, to know more, to socialize more, to talk more, to feel more. Why be trapped in these small screens when you can go out & explore more?

So let us try and give up on these social networks as much as possible and encourage an improvement in our social behaviours. Let us meet, talk, sing, dance & be happy with each other in real and not in reel!

## The Danger of Day Dreaming

**- Kumari Neha Nitin Hegde**

Some of you may enjoy thinking about future. And what you will do if you have some unexpected luck! A little day dreaming is fine. But too much day dreaming might prove dangerous like it happened with Govinda.

Govinda was poor. Thats because he hated to do any work. Govinda had a rich neighbour called Gopal. Gopal was an oil merchant. He was a generous man and gave Govinda a big jar of oil. Govinda kept it on the window. He looked at the jar & was lost in dreams. 'I wonder how much oil the jar contains', 'It must be quite lot'. 'If I would sell half of it I could buy a cow. I would sell the milk everyday and get rich. Soon the cow would have calves. Selling all the milk of cows and calves will make me very rich. I'd build a big house and get married. My wife will look after the house. I would have 2/3 sons, They would run my business. Then I will live happily. If my sons did not work, then I will hit them with stick. Saying this Govinda swished his stick over his head and hit the jar. The jar of oil broke and fell on the floor. Govinda could not use even a drop, let alone sell it!!!

*PAGE DONATED BY : **SHRI N. R. HEGDE,** DOMBIVLI*

# VEDIC WAY

✍ **Uday Koppikar**

***Susvagatam! Hearty Welcome!***



One might well be tempted to ask why the seers emphasized strict adherence to Dharma placing Dharma at the very top of the Four Purusharthas of Dharma, Artha, Kama and Moksha. In this age of "scientific" reasoning and 'logic' devoid of intuition and faith, this question could well be followed by the argument that the developed world is doing very well in the materialistic sense with focus on Artha and Kama only. Where all sorts of physical and material allure is available aplenty to be indulged in, subject to having the money for it. So, the argument might well be that it makes perfectly good sense to earn money, even obscene amounts by means fair or foul and then expend most of it on selfish pleasures.

The above argument is tenable only in part. For all the materialistic advantages the incidence of mental ailments and psychologically unbalanced people having a tough time trying to adjust to the unending demands of the societal matrices in such paradigms, ought to be enough to put off sensible persons having even a modicum of spiritual inclinations. Unfortunately, the projections of a terrific lifestyle effectively hide the ugly truth by screening off the underbelly.

The fact is that with unbridled emphasis on Artha and Kama to near exclusion of Dharma, observed in such societal ambience, humans simply run around in ever increasing circles of ambition, thereby undergoing ill-effects of giving access to SHADRIPU - the six enemies of humanity, viz. KAMA (pleasure), KRODHA (passion), MOHA (attachment), MADA (arrogance), MATSARA (envy) and LOBHA (avarice). Almost everybody gets lured into the unending rat race, where even winners REMAIN rats at all times, maybe tired ones at the fag end, but rats nevertheless!

The moment Dharma makes its presence felt, a subtle transformation takes place within and we start to consider the AFTERMATH of our actions. We develop our latent faculty of VIVEK (judicious and wise discrimination). We desist from chasing the ever-elusive chimera of "happiness just around the corner" and find true contentment right where we find ourselves. Our actions then conform to the tenets of Dharma regardless of temptations and allure of all kinds.

ATRI, a great Vedic rishi, says,

अवश्यमेव भोक्तव्यं कृतंकर्मशुभाशुभम्।
नाऽभुक्तं क्षीयते कर्मकल्पकोटिशतैरपि।।
अत्रिस्मृति :।।

This means, "Regardless of whether actions are auspicious or inauspicious (i.e. good or bad) one has to undergo their aftermath even if it be after thousands of eons (because without undergoing this fruit of karmas, there cannot be any liberation)."

The above wisdom nugget suggests rebirth as natural corollary since everything in creation is cyclical and we cannot become the exception as we simply cannot live for thousands of eons albeit our ego may not allow us to believe that we may have to answer for our inappropriate actions of the present in some future births. Or that we are undergoing the outcome of our past actions. This disbelief is what causes some of us to do all kinds of unworthy acts and waste such a wonderful opportunity to spiritually elevate ourselves.

There is also another cogent reason why we ought to always abide by Dharma. In Sanskrit, Dharma also means a PILLAR, a pillar of strength around which the entire structure is built. In humans this is akin to the spine. It is the spine which is responsible for our being able to stand erect. Do we not say of a person who never stands up for himself as being a "spineless jellyfish"?

When we abide by Dharma, we become internally powerful. We are no longer subjected to the trepidations that living mere one-dimensional existence usually entails.The Vedic dictum DHARMO RAKSHATI RAKSHITAH i.e. Dharma protects those who abide by, thereby protect Dharma, holds perfectly in all conceivable situations. There are several other reasons why the seers have bestowed upon Dharma the highest place among the four Purusharthas. We shall address these later on in our sojourn on appropriate points of time.

Boundless Grace Divine of Cosmic Mother LALITA TRIPURASUNDARI illumining our way in our sojourn herein, we have been able to come thus far and one is confident of Her continued Motherly Care, Love, Guidance and Protection as we wend our way, regardless of whether we deserve this ANUGRAHA or not. We will stop here. So, Friend, till we meet again next month and even thereafter, SHUBHAM BHAVATU! May Good Prevail! KALYANAMASTU! May Total Weal Manifest!

***[Reproduced with permission from "Vedic Way"; copyright vests with the author. All rights reserved.]***

*PAGE DONATED BY :* ***SMT POORNIMA AKADAS & FAMILY***

# ರೋಚಕ ಅನುಭವದ ಪ್ರವಾಸ ಕಥನ -
# ಮಮತಾ ರಾವ್ ಅವರ 'ಕೈಲಾಸಾಧಿಪತಿಯ ಮನೆಯಂಗಳದಲ್ಲಿ'

✍ **ಶಾರದಾ ಎ. ಅಂಚನ್, ನವಿಮುಂಬಯಿ**

ಶ್ರೀಮತಿ ಮಮತಾ ರಾವ್ ಅವರದು ಮುಂಬಯಿ ಸಾಹಿತ್ಯ, ಸಾಂಸ್ಕೃತಿಕ ರಂಗದಲ್ಲಿ ಚಿರಪರಿಚಿತ ಹೆಸರು. ಬ್ಯಾಂಕ್ ಉದ್ಯೋಗಿಯಾಗಿದ್ದುಕೊಂಡು ಸಾಹಿತ್ಯದತ್ತ ತೀವ್ರ ಆಸಕ್ತಿ ಇರುವ ಇವರು ಇತ್ತೀಚೆಗೆ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಸಿಕ್ಕಿದಾಗ ಆತ್ಮೀಯತೆಯಿಂದ ನನ್ನ ಕೈಗಿತ್ತ ಕೃತಿ 'ಕೈಲಾಸಾಧಿಪತಿಯ ಮನೆಯಂಗಳದಲ್ಲಿ' ಪ್ರವಾಸ ಲೇಖನ.

ತನ್ನ ಒಂದು ತಿಂಗಳ ಪ್ರವಾಸದ ಪ್ರಾರಂಭದ ದಿನದಿಂದ ಅಂತಿಮ ದಿನದವರೆಗಿನ ಪ್ರತೀ ಅನುಭವಗಳನ್ನು, ಘಟನೆಗಳನ್ನು ತಮ್ಮ ಬರಹದಲ್ಲಿ ಮಂಡಿಸಿ, ಕೃತಿ ರೂಪದಲ್ಲಿ ತಂದ ಮಮತಾ ರಾವ್ ಅವರಿಗೆ ಕೃತಜ್ಞತೆ ಸಲ್ಲಿಸಲೇಬೇಕು.

ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಳ್ಳುವುದು ಪ್ರತಿಯೊಬ್ಬರಿಗೂ ಅಸಾಧ್ಯದ ಮಾತು. ಇತ್ತೀಚಿನ ದಿನಗಳಲ್ಲಿ ದೈಹಿಕ ನ್ಯೂನತೆ, ಅನಾರೋಗ್ಯ ತುಂಬಿಕೊಂಡಿರುವ ಜೀವಗಳೇ ಎಲ್ಲೆಲ್ಲೂ ಇರುವಾಗ ಲೇಖಕಿ ಈ ಎಲ್ಲ ಪರೀಕ್ಷೆಗಳಿಂದ ಗೆದ್ದು ಯಶಸ್ವಿಯಾಗಿ ಈ ಪ್ರವಾಸಕ್ಕೆ ಆಯ್ಕೆಯಾಗಿ ಕೈಲಾಸಾಧಿಪತಿಯ ಸನ್ನಿಧಾನಕ್ಕೆ ಹೋಗಿ ಬಂದ ಆಕೆಯ ಧೈರ್ಯಕ್ಕೆ ಮೆಚ್ಚಲೇಬೇಕು. ಅಲ್ಲದೆ, ಮಮತಾ ರಾವ್ ಅವರು ಸದಾ ಹಸನ್ಮುಖಿ. ಕೆಲವರನ್ನು ಅರಿತುಕೊಳ್ಳಲು ಅವರ ಒಂದು ನಗು, ಒಂದೇ ಮಾತು ಸಾಕಾಗುತ್ತದೆ. ಆದರೆ ಇನ್ನು ಕೆಲವರನ್ನು ಅರಿಯಲು ವರ್ಷಗಟ್ಟಲೆ ಅವರೊಂದಿಗಿದ್ದರೂ ಸಾಧ್ಯವಾಗುವುದಿಲ್ಲ. ಮಮತಾ ರಾವ್ ಅವರು ಮೊದಲನೇ ಪಂಕ್ತಿಯಲ್ಲಿ ನಿಲ್ಲುತ್ತಾರೆ.

ಸಮುದ್ರ ಮಟ್ಟದಿಂದ ಸುಮಾರು 16,500 ಅಡಿ ಎತ್ತರದಲ್ಲಿರುವ ಪರಮಶಿವನ ಕೈಲಾಸ ಶಿಖರವನ್ನು ಏರಿಬಂದ ಲೇಖಕಿಯ ಧೈರ್ಯ, ಸಾಹಸ ವರ್ಣನಾತೀತ. ಆ ರೋಚಕ ಅನುಭವವನ್ನು ಓದುತ್ತಿದ್ದಂತೆ ಹೃದಯದ ಬಡಿತ ಕ್ಷಣಕಾಲ ಸ್ತಬ್ಧವಾದಂತೆ ಭಾಸವಾಗುತ್ತದೆ. ಉಸಿರು ನಿಂತ ಅನುಭವವಾಗುತ್ತದೆ. ಅಬ್ಬಾ! ಎಷ್ಟೊಂದು ಕಠಿಣ ಈ ಯಾತ್ರೆ ಎಂಬ ಉದ್ಗಾರವೂ ಹೊರ ಹೊಮ್ಮುತ್ತದೆ.

2009ರ ಆಗಸ್ಟ್ ತಿಂಗಳಲ್ಲಿ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಮುಗಿಸಿ ಬಂದ ಲೇಖಕಿ 'ಹಿಮಚ್ಛಾದಿತ ಶಿಖರಗಳು, ನದಿ-ಹಸಿರು-ಕಣಿವೆ- ಸರೋವರದ ನಿಸರ್ಗ ಸೌಂದರ್ಯವನ್ನು ಏಕಾಂಗಿಯಾಗಿ ಆಸ್ವಾದಿಸುವ ಅವಕಾಶ ಈ ಯಾತ್ರೆ ನನಗೆ ನೀಡಿತು. ಹಿಮಾಲಯದ ಅತ್ಯುನ್ನತ ಶಿಖರಗಳ ಎದುರಿನಲ್ಲಿ ಕುಬ್ಜಳನ್ನಾಗಿಸಿ, ಪ್ರಶಾಂತವಾದ ಏಕಾಂತದಲ್ಲಿ ಪ್ರಸನ್ನವಾದ ಚಿತ್ತ ಸ್ಥಿತಿಗೆ ತಲುಪಿಸಿ, ಮಾತಿಲ್ಲದ ಮೌನದ ಸಮಾಧಿ ಸ್ಥಿತಿಯಲ್ಲಿ ದೈನಂದಿನ ಯಾಂತ್ರಿಕ ಬದುಕಿನಲ್ಲಿ ಕಳೆದುಹೋಗುತ್ತಿರುವ ಅರ್ಥವಂತಿಕೆಯನ್ನು ಮರುಶೋಧಿಸುವಂತೆ ಮಾಡಿ, ನನ್ನ ಅನುಭವಗಳನ್ನು ಈ ಕೃತಿಯ ರೂಪದಲ್ಲಿ ನಿಮ್ಮವನ್ನಾಗಿಸಿ ನಿಮಗೂ ಮಾನಸ ಭೂಖಂಡ ಯಾತ್ರೆಯ ಅನುಭವ ದಕ್ಕುವಂತೆ ಮಾಡಲು ನನ್ನನ್ನು ಬದುಕಿ ಉಳಿಸಿದ ಮಹಾದೇವಿಗೆ ಸಾವಿರ ಸಾವಿರ ನಮನಗಳು' ಎಂದು ಭಾವುಕತೆಯಿಂದ ಹೇಳಿದ ಅವರ ಮನದ ಮಾತುಗಳು ಕೈಲಾಸ ಅಧಿಪತಿಯ ಪ್ರವಾಸ ಅದೆಷ್ಟು ಕ್ಲಿಷ್ಟಕರ, ಸಂಕಟಕರ ಎಂಬ ಸತ್ಯ ಅವರ ಈ ಮಾತಿನ ಸಾರಾಂಶದಲ್ಲೇ ಕಂಡುಬರುತ್ತದೆ.

'ಮಹಾದೇವನ ವಾಸಸ್ಥಾನವೆಂದು ತಿಳಿಯಲಾದ ಕೈಲಾಸ ಪರ್ವತ ವಿರುವುದು ಟಿಬೇಟಿನಲ್ಲಿ. ಟಿಬೇಟನ್ನು ಜಗತ್ತಿನ ಮೇಲ್ಛಾವಣಿ ಎಂದು ಕರೆಯಲಾಗಿದೆ. ಇದರ ಪ್ರಸ್ಥಭೂಮಿ ಜಗತ್ತಿನಲ್ಲೇ ಅತ್ಯಂತ ಎತ್ತರದಲ್ಲಿರುವ ಕಾರಣವೇ ಈ ಹೆಸರು. ಇದರ ಪಶ್ಚಿಮಕ್ಕೆ ಕಾಶ್ಮೀರ, ಉತ್ತರಕ್ಕೆ ಕುನ್‌ಲೂನ್ ಪರ್ವತಶ್ರೇಣಿ, ಪೂರ್ವಕ್ಕೆ ಚೀನಾ ಹಾಗೂ ದಕ್ಷಿಣಕ್ಕೆ ಭಾರತ, ನೇಪಾಳ ಭೂತಾನ್ ದೇಶಗಳಿವೆ. ಸಂಸ್ಕೃತದಲ್ಲಿ ಟಿಬೇಟಿಗೆ 'ತ್ರಿವಿಷ್ಟಪ' ಎಂಬ ಹೆಸರಿದೆ. ಇದರ ಅರ್ಥ ಭೂಮಿಯ ಮೇಲಿನ ಸ್ವರ್ಗ. ಶತಮಾನಗಳಿಂದ ಸ್ವತಂತ್ರ ದೇಶವಾಗಿದ್ದು, ಹೊರದೇಶಗಳೊಂದಿಗೆ ವ್ಯಾಪಾರ ಸಂಬಂಧಗಳಿದ್ದರೂ ಅತ್ಯುನ್ನತವಾದ ಹಿಮಾಲಯ ಪರ್ವತ ಶ್ರೇಣಿಯಿಂದ ಆವೃತವಾದ ಟಿಬೇಟಿನ ಜನರು ಬೌದ್ಧ ಧರ್ಮದ ಅನುಯಾಯಿಗಳಾಗಿದ್ದುದರಿಂದ ಸನ್ಯಾಸಿಗಳಂತೆ ಜೀವನ ನಡೆಸುವವರು. ಸದಾ ನಗುಮೊಗದ ಅಲ್ಪ ಸಂತುಷ್ಟಿಗಳಾದ ಶಾಂತಿ ಪ್ರಿಯ ಜನರನ್ನು ಸದೆಬಡಿಯುವಲ್ಲಿ ಸಫಲವಾದ ಚೀನಾದೊಂದಿಗೆ ಭಾರತದ ರಾಜಕೀಯ ಸಂಬಂಧ 1962ರಲ್ಲಿ ಬಿಗಡಾಯಿಸಿತು' ಎಂದು ಲೇಖಕಿ ಮಾನಸ ಸರೋವರದ ಕೈಲಾಸನಾಥನ ವಾಸಸ್ಥಾನ ಟಿಬೇಟಿನ ಬಗ್ಗೆ, ಅಲ್ಲಿಯ ಜನರ ಬಗ್ಗೆಯೂ ಅವರ ಜೀವನಶೈಲಿಯ ಬಗ್ಗೆಯೂ ಈ ಕೃತಿಯಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ತಮ್ಮ ಅನುಭವಗಳನ್ನು 9 ಹಂತಗಳಲ್ಲಿ ಬರೆದ ಲೇಖಕಿಯು ತಮ್ಮ ಪ್ರವಾಸದ ಬಗ್ಗೆ ವಿವರಿಸುತ್ತಾ, 'ಕಾಳಿನದಿಯ ಒಡನಾಟದಲ್ಲಿ' ಎಂಬ ಶೀರ್ಷಿಕೆಯಡಿಯಲ್ಲಿ ಬರೆದ ಈ ಸಾಲುಗಳನ್ನು ಓದುವಾಗ ಲೇಖಕಿಯ ಮಾನಸಿಕ ಸ್ಥಿತಿ, ಅಲ್ಲಿಯ ಇತರ ಪ್ರಯಾಣಿಕರ ಪರಿಸ್ಥಿತಿಗಳ ಬಗ್ಗೆ ಅರಿವಾಗುತ್ತದೆ. ಓದುವಾಗ ಹೃದಯ ಝಲ್ಲೆನಿಸುತ್ತದೆ.

'ಈ ದಾರಿಯ ಮೊದಲ ಭಾಗದಲ್ಲಿ 5 ಕಿ. ಮೀ. ನಷ್ಟು ದಾರಿಯನ್ನು ಸುಮಾರು 4,500 ಮೆಟ್ಟಿಲುಗಳ ರೂಪದಲ್ಲಿ ನಾವಿಂದು ಇಳಿಯಬೇಕಿತ್ತು. ಕಡಿದಾದ ಬೆಟ್ಟಗಳನ್ನು ಕೆತ್ತಿ ಮಾಡಿದ ಮೆಟ್ಟಿಲುಗಳಿವು. ಆಕಾರದಲ್ಲಿ, ಅಂತರದಲ್ಲಿ ತಾಳಮೇಳವಿಲ್ಲದ ಪಾತಾಳಕ್ಕೊಯ್ಯುವಂತಿದ್ದ ಆ ಮೆಟ್ಟಿಲುಗಳನ್ನು ನಿಧಾನವಾಗಿ ಇಳಿಯಲು ಪ್ರಾರಂಭಿಸಿದೆನು. ಒಂದು ಬಾರಿಗೆ ಒಬ್ಬ ಮಾತ್ರ ನಡೆಯಬಹುದಾದ ಕಡಿದಾದ ಆ ದಾರಿಯಲ್ಲಿ ಕುದುರೆಯ ಮೇಲಿನ ಸವಾರಿ ನಿಷಿದ್ಧವಾದುದರಿಂದ ಕುದುರೆಗಳೆಲ್ಲವೂ ನಮಗಿಂತ ಮೊದಲೇ ಕೆಳಗೆ ಹೋಗಿಯಾಗಿತ್ತು. ಯುವಕರೆಲ್ಲರೂ ಸಹಜವಾಗಿ ದುಡು ದುಡು ಎಂದು ಜಿಗಿಯುತ್ತಾ ಮೆಟ್ಟಿಲುಗಳನ್ನು ಇಳಿಯುತ್ತಾ ನಡೆದಿದ್ದರು. ನನಗೋ ಎತ್ತರದಿಂದ ಕೆಳಗೆ ನೋಡಿದರೆ ಶಿರೋಭ್ರಮಣದ ಕಾರಣ ನನ್ನ ಪಾದದ ಕಡೆಗೆ ಮಾತ್ರ ದೃಷ್ಟಿ ನೆಟ್ಟು ಒಂದೊಂದೇ ಹೆಜ್ಜೆಯನ್ನು ನಿಧಾನವಾಗಿ ಜಾಗರೂಕತನದಿಂದ ಊರುತ್ತಾ ಮುಂದುವರಿದೆ. ಮಳೆ ನೀರಿನಿಂದ ಒದ್ದೆಯಾಗಿ ಪಾಚಿಗಟ್ಟಿದ್ದ ಬಂಡೆಗಲ್ಲುಗಳ ಮೇಲಿಂದ ಇಳಿಯುವಾಗ ಕಾಲುಜಾರಿ.... ದಿನಗಳಲ್ಲಿ ಮಾಡಬೇಕಿದ್ದ ಕಠಿಣ ಯಾತ್ರೆಗಾಗಿ

*PAGE DONATED BY : **SHRI ROKESH HEGDE, DAHISAR & FAMILY***

ಕಾಲುಗಳೆರಡೂ ಕ್ಷೇಮವಾಗಿರಲೇಬೇಕು ಎನ್ನುವ ಕಟುಸತ್ಯ ಮನದಟ್ಟಾಗಿತ್ತು.' ಎಂದು ಬರೆದ ಲೇಖಕಿಯು ಮಾತುಗಳಲ್ಲಿ ಅಂತೂ ಇಂತೂ ಕೈಲಾಸಾಧಿಪತಿಯ ಸಾನಿಧ್ಯದವರೆಗೂ ತಲುಪಲೇಬೇಕು. ಅದಕ್ಕಾಗಿ ತನ್ನನ್ನು ತಾನು ದೈಹಿಕವಾಗಿ, ಮಾನಸಿಕವಾಗಿ ಶಕ್ತಿಯುತವಾಗಿ ಇರಿಸಿಕೊಳ್ಳಬೇಕು ಎನ್ನುವ ನಿರ್ಣಯ ಮನದಟ್ಟಾಗುತ್ತದೆ. ಹಾಗೆಯೇ ಮುಂದುವರಿಯುತ್ತಾ, ಲೇಖಕಿ 'ಎದುರಿಗೆ ಕಾಲಿಯ ದಡದಲ್ಲಿ ನಮ್ಮ ನೆರೆ ರಾಜ್ಯ ನೇಪಾಳದ ಹಸಿರಿನಿಂದ ನಳನಳಿಸುತ್ತಿರುವ ಬೆಟ್ಟಗಳು ಕಣ್ಣುಗಳಿಗೆ ತಂಪನ್ನೆರೆಯುತ್ತಿತ್ತು. ಎರಡು ದೇಶಗಳನ್ನು ಇಬ್ಭಾಗಿಸಿ ಬೆಟ್ಟಗಳನ್ನು ಕೊರೆಯುತ್ತಾ ಹರಿಯುವ ಕಾಲಿನದಿಯ ನೀರು ಕಪ್ಪು ಬಣ್ಣದಾದುದರಿಂದಲೇ ಆಕೆಯ ಹೆಸರು ಕಾಲಿ ಎಂದಾಗಿರಬೇಕು. ಬೆಟ್ಟಗಳ ಮೇಲಿನಿಂದ ಸುರಿಯುತ್ತಿದ್ದ ನೀರ ತೊರೆಗಳು ಜಲಪಾತಗಳಾಗಿ ನಮ್ಮ ತಲೆಯ ಮೇಲೆ ಹರಿದು ನಮ್ಮನ್ನು ಒದ್ದೆ ಮಾಡುತ್ತಿದ್ದವು. ಹೆಜ್ಜೆಗೊಂದರಂತೆ ಸಿಗುತ್ತಿದ್ದ ಕೆಲವು ಸಣ್ಣಪುಟ್ಟ ಜಲಪಾತಗಳನ್ನು ಸಾಧಾರಣವಾಗಿ ಓಡು ನಡಿಗೆಯಲ್ಲಿ ಕ್ರಮಿಸಿದರೆ, ಇನ್ನು ಕೆಲವು ಕಡೆ ಧಾರಾಕಾರವಾಗಿ ಸುರಿಯುವ ಜಲಪಾತಗಳನ್ನು ಶ್ವಾಸ ಕಟ್ಟಿಕೊಂಡು ಓಡಿ ದಾಟಬೇಕಾಗುತ್ತಿತ್ತು. ನಡಿಗೆಯಲ್ಲಿ ಏನಾದರೂ ತಪ್ಪಾಯಿತೋ, ಯಾವುದಾದರೂ ಕಲ್ಲು ಮೆಟ್ಟಿ ಮುಗ್ಗರಿಸಿದರೂ... ಮುಗಿಯಿತು ನಿಮ್ಮ ಕಥೆ, ನೇರವಾಗಿ ಕಾಳಿನದಿಯ ಮಡಿಲಿಗೆ ಬೀಳುವುದು ಖಂಡಿತಾ! ಎಂದು ತಮ್ಮ ರುದ್ರ ರಮಣೀಯ ಅನುಭವವನ್ನು ಬಿಚ್ಚಿಡುತ್ತಾ ಓದುಗರ ಹೃದಯ ಬಡಿತವನ್ನು ಹೆಚ್ಚಿಸುತ್ತಾರೆ.

ಡಾ. ಜಿ. ಎಸ್. ಉಪಾಧ್ಯರು ತಮ್ಮ ಮುನ್ನುಡಿಯಲ್ಲಿ ಬರೆದಿರುವಂತೆ ಈ ಪ್ರವಾಸ ಕಥನ ಕೇವಲ ಪ್ರವಾಸದ ಕಥೆಯಾಗಿರದೆ ಚೀನಿಯರ ಜನಜೀವನ, ಅವರ ಜೀವನ ಶೈಲಿಗಳ ಬಗ್ಗೆಯೂ ಮಾಹಿತಿ ನೀಡುವಲ್ಲಿ ಯಶಸ್ವಿಯಾಗಿ ವೈಚಾರಿಕ ವಿಷಯಗಳಿಂದಲೂ ತುಂಬಿಕೊಂಡಿದೆ ಎಂದಿದ್ದಾರೆ. ಇದಕ್ಕೆ ಉದಾಹರಣೆಯಾಗಿ 'ಚೀನಿಯರ ಆತಿಥ್ಯದ ಸವಿಯಲ್ಲಿ' ಎಂಬ ಶೀರ್ಷಿಕೆಯಡಿಯಲ್ಲಿ ಲೇಖಕಿ ಈ ರೀತಿ ಬರೆದಿದ್ದಾರೆ.

'ತಕಲಾಕೋಟ್‌ನ ರಸ್ತೆಯಲ್ಲಿ ಟಿಬೇಟಿಯನ್ನರಿಗಿಂತ ಹೆಚ್ಚು ಚೀನಿಯರೇ ಕಂಡುಬರುತ್ತಾರೆ. ಮಿಲಿಟರಿ ವೇಷಭೂಷಣಗಳಲ್ಲಿ ಹಾಗೂ ಸೂಟುಬೂಟಿನಲ್ಲಿ ತಿರುಗಾಡುತ್ತಿರುವ ಚೀನೀ ಪುರುಷರ ತೋಳಿಗೆ ತೆಕ್ಕೆ ಬಿದ್ದಿರುವ ಆಕರ್ಷಕ ತರುಣಿಯರ ಹಾವಭಾವ ಅವರು ಬಹುಶಃ ವೇಶ್ಯೆಯರಾಗಿರಬೇಕು ಎನ್ನುವುದನ್ನು ಸೂಚಿಸುವಂತಿತ್ತು. ಸ್ಥಳೀಯ ಮಧ್ಯವಯಸ್ಕ ಟಿಬೇಟಿಯನ್ನರು ಕೊಳಕು ಉಡುಗೆ ತೊಡುಗೆಯಲ್ಲಿ ಅಂಗಡಿಗಳಲ್ಲಿ, ಹೊಟೇಲುಗಳಲ್ಲಿ, ರಸ್ತೆಗಳಲ್ಲಿ ಕೆಲಸ ಮಾಡುತ್ತಾ ಇದ್ದರು. ಅವರ ಮಕ್ಕಳು ರಸ್ತೆಯಲ್ಲಿ ಆಟವಾಡುತ್ತಾ ಕಾಲಕ್ಷೇಪ ಮಾಡುತ್ತಿರುವುದನ್ನು ಕಾಣಬಹುದಾಗಿತ್ತು. ಯುವಕರು ಅಲ್ಲಲ್ಲಿ ಗುಂಪು ಕಟ್ಟಿಕೊಂಡು ಕಾಲಹರಣ ಮಾಡುತ್ತಿದ್ದರು. ನಾವು ಟಿಬೇಟಿನಲ್ಲಿದ್ದ ಹದಿನಾಲ್ಕು ದಿನದ ವಾಸದಲ್ಲಿ ಶಾಲೆಯ ಸಮವಸ್ತ್ರ ಧರಿಸಿದ ಮಕ್ಕಳನ್ನಾಗಲಿ ಅಥವಾ ಪುಸ್ತಕಗಳನ್ನು ಬಿಡಿ ದಿನಪತ್ರಿಕೆಯನ್ನಾದರೂ ಓದುತ್ತಿರುವ ಯುವಕರನ್ನು ನಾನು ನೋಡಲಿಲ್ಲ. ನಾನು ನೋಡಿದ ತಕಲಾಕೋಟ್ ನಗರದಲ್ಲಿ ಸಿನಿಮಾ ಥಿಯೇಟರ್‌ಗಳಿದ್ದವು. ನೈಟ್‌ಕ್ಲಬ್‌ಗಳಿದ್ದವು. ಮದ್ಯಪಾನಕ್ಕೆ ನಿಷೇಧವಿರಲಿಲ್ಲ. ಹೆಣ್ಣು ಗಂಡೆಂಬ ಭೇದವಿಲ್ಲದ ಎಲ್ಲರ ಬಾಯಲ್ಲಿ ಉರಿಯುವ ಸಿಗರೇಟುಗಳಿದ್ದವು. ವೇಶ್ಯಾವಾಟಿಕೆ ಜೋರಾಗಿ ನಡೆಯುತ್ತಿತ್ತು. ಬಡತನ ಕಣ್ಣಿಗೆ ರಾಚುವಂತಿತ್ತು. ಟಿಬೇಟಿನ ಅಶಿಕ್ಷಿತ ಯುವ ಜನಾಂಗದ ಬಗ್ಗೆ ನನಗೆ ತುಂಬಾ ಖೇದವೆನಿಸಿತು. ನಗರದ ಮುಖ್ಯ ಮಾರ್ಗವನ್ನು ಬಿಟ್ಟರೆ ನಾವು ನೋಡಿದ ಚೀನಾ ಅತಿಕ್ರಮಿಸಿರುವ ಟಿಬೇಟಿನಲ್ಲಿ ಒಳ್ಳೆಯ.... ಸೇತುವೆಗಳಿಲ್ಲ. ಸ್ಥಳೀಯ ಜನರಿಗಾಗಿ ಕಟ್ಟಿದ ಒಳ್ಳೆಯ ವಸತಿ ಸೌಕರ್ಯವಾಗಲಿ, ಶಾಲಾ ಕಾಲೇಜುಗಳನ್ನಾಗಲಿ ನಾನು ಕಂಡಿಲ್ಲ ಎನ್ನಲು ವಿಷಾದವೆನಿಸುತ್ತದೆ. ಕಳೆದ ನಲ್ವತ್ತು ವರ್ಷಗಳಲ್ಲಿ ಚೀನಾ ತನ್ನ ರಾಜ್ಯದ ಇತರ ಭಾಗಗಳಲ್ಲಿ ಮಾಡಿರುವ ಪ್ರಗತಿಯನ್ನು ಗಮನಿಸಿದರೆ ಟಿಬೇಟನ್ನು ನಿರ್ಲಕ್ಷಿಸಿರುವುದು ಮನದಟ್ಟಾಗುತ್ತದೆ. ಚೀನೀ ಸರಕಾರ ಇಲ್ಲಿಯ ಜನಾಂಗವನ್ನು ಧಾರ್ಮಿಕವಾಗಿ, ನೈತಿಕವಾಗಿ, ಆರ್ಥಿಕವಾಗಿ, ಬೌದ್ಧಿಕವಾಗಿ ನಾಶಗೊಳಿಸುವ ಪರಿಯನ್ನು ಕಣ್ಣಾರೆ ಕಂಡ ನನಗೆ ಭಾರತದಲ್ಲಿ ಸುಖವಾಗಿ ಕುಳಿತು ಸ್ವತಂತ್ರ ಟಿಬೇಟಿನ ಕನಸನ್ನು ಕಾಣುವ ಹಾಗೂ ಜಗತ್ತಿಗೆ ಕಾಣಿಸುವ ಕೆಲಸವನ್ನೇ ಮಾಡುತ್ತಿರುವ ದಲಾಯಿಲಾಮಾರ ಬಗ್ಗೆ ತುಂಬಾ ಸಿಟ್ಟು ಬಂತು' ಎಂದು ಟಿಬೇಟಿಯನ್ನರನ್ನು ಚೀನಾ ಸರಕಾರ ಶೋಷಿಸುತ್ತಿರುವ ಪರಿಯನ್ನು ಕಣ್ಣಿಗೆ ಕಟ್ಟುವಂತೆ ಬರೆದ ಲೇಖಕಿಯ ಮಾತುಗಳಲ್ಲಿ ಸಾಮಾಜಿಕ ಕಳಕಳಿಯಿರುವುದು ಎದ್ದು ಕಾಣುತ್ತದೆ.

ಅಲ್ಲದೆ, ಟಿಬೇಟಿಯನ್ ಮಹಿಳೆಯರ ಶೋಷಣೆ ಯಾವ ರೀತಿ ಚೀನಿಯರು ಮಾಡುತ್ತಿದ್ದಾರೆ ಹಾಗೂ ಮಹಿಳೆಯರ ಜೀವನದ ಬಗ್ಗೆ ಲೇಖಕಿ ತನ್ನ 'ಕೈಲಾಸಾಧಿಪತಿಯ ಮನೆಯಂಗಳದಲ್ಲಿ' ಎನ್ನುವ ಶೀರ್ಷಿಕೆಯಡಿಯಲ್ಲಿ ಬರೆಯುತ್ತಾ..

'ಸದಾ ನಗುನಗುತ್ತಾ ಮಾತಾಡುವ ಟಿಬೇಟಿಯನ್ ಮಹಿಳೆಯರು ಇತರ ದೇಶದ ಮಹಿಳೆಯರಿಗಿಂತ ಬೇರೆಯೇ ರೀತಿಯ ಲೈಂಗಿಕ ಮತ್ತು ಸಾಮಾಜಿಕ ಪದ್ಧತಿಯನ್ನು ಅನುಭವಿಸುತ್ತಾರೆ. ಸಮಾಜದಲ್ಲಿ ಹೆಣ್ಣಿಗೆ ಸಮಾನ ಹಕ್ಕುಗಳಿವೆ. ಬಹಳ ಕಠಿಣ ಪರಿಸ್ಥಿತಿಯಲ್ಲಿ ಬದುಕುವ ಇವರಲ್ಲಿ ಬಹುಪತ್ನಿತ್ವ ಪದ್ಧತಿಯೂ ಇದೆ. ಮನೆಯಲ್ಲಿ ಹಿರಿಯರು ಮದುವೆಯಾದ ಹೆಣ್ಣು ಅವನ ಉಳಿದ ತಮ್ಮಂದಿರೆಲ್ಲರಿಗೂ ಪತ್ನಿಯಾಗುತ್ತಾಳೆ. ಆದುದರಿಂದ ಅವರಲ್ಲಿ ಮನೆಗಳು ಒಡೆದಿಲ್ಲ. ಮನೆತನಗಳು ಹೆಚ್ಚಾಗಿಲ್ಲ... ಇಲ್ಲಿ ಸಾಮಾನ್ಯ. ವಿಧವೆ ಮತ್ತು ವಿಧುರರ ನಡುವೆ ನಿಯೋಗ ಪದ್ಧತಿಯೂ ಇಲ್ಲಿ ಕಂಡುಬರುತ್ತದೆ. ತಮ್ಮ ತಮ್ಮ ಮನೆಯಲ್ಲಿದ್ದು, ಕೂಡಿಕೊಳ್ಳುವಿಕೆಯಿಂದ ಹುಟ್ಟಿದ ಮಗು ಹೆಣ್ಣಿನ ಸ್ವತ್ತು. ಸಾಮಾನ್ಯ ವಿವಾಹದಿಂದಾದ ಮಕ್ಕಳಿಗೆ ಸಿಗುವ ಹಕ್ಕುಬಾಧ್ಯತೆಗಳೆಲ್ಲವೂ ಈ ಮಗುವಿಗೆ ಕೂಡ ಸಿಗುವುದು ವಿಶೇಷ. ಚೀನೀ ಸೈನಿಕರು ಇಲ್ಲಿಯ ಜನತೆಯ ಮೇಲೆ ಮುಖ್ಯವಾಗಿ ಇಲ್ಲಿಯ ಮಹಿಳೆಯರ ಮೇಲೆ ನಡೆಸುವ ಬರ್ಬರ ಅತ್ಯಾಚಾರಕ್ಕೆ, ದೌರ್ಜನ್ಯಕ್ಕೆ ಎಡೆಯಿಲ್ಲ. ಕುಟುಂಬ ನಿಯೋಜನೆಯನ್ನು ಕಡ್ಡಾಯವನ್ನಾಗಿ ಮಾಡಿ ಅದನ್ನು ಉಲ್ಲಂಘಿಸಿದವರಿಗೆ ಕಠಿಣ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಒಟ್ಟಿನಲ್ಲಿ ಇಲ್ಲಿಯ ಜನತೆಯನ್ನು ಧಾರ್ಮಿಕವಾಗಿ, ನೈತಿಕವಾಗಿ, ಆರ್ಥಿಕವಾಗಿ ನೆಲಕಚ್ಚುವಂತೆ ಮಾಡುವ ಎಲ್ಲಾ ಮಾರ್ಗಗಳನ್ನು ಚೀನಿ ಸರಕಾರವು ಅನುಸರಿಸುತ್ತದೆ' ಎಂದು ಖೇದದಿಂದ ನುಡಿದಿದ್ದಾರೆ.

ಈ ಯಾತ್ರೆಯಲ್ಲಿ ರೋಮಾಂಚನ, ಅಲೌಕಿಕ, ಅವರ್ಣನೀಯ ಮನ, ಏಕಾಂತ, ನಿಶ್ಯಬ್ದ, ಎದೆ ಬಾಯಿಗೆ ಬಂದಂತಾಗುವುದು, ಎಲುಬು ಕೊರೆಯುವ ಚಳಿ ಇತ್ಯಾದಿ ಶಬ್ದಗಳ ನಿಜವಾದ ಅರ್ಥವನ್ನು ಅನುಭವಿಸುವ, ಅರಿಯುವ ಸೌಭಾಗ್ಯ ನನ್ನದಾಗಿತ್ತು ಎಂದು ಲೇಖಕಿ ಕೈಲಾಸ ಶಿಖರದ ಮೇಲಿನ ಶಿವನ ರೂಪವನ್ನು ಕಂಡು ಉದ್ವಿಗ್ನತೆಯಿಂದ ಹೇಳುತ್ತಾರೆ. ಎಂತಹ ಅಮೋಘ ದೃಶ್ಯವದು! 'ಇದು ಭಾಗ್ಯವಯ್ಯಾ...ಇದು ಭಾಗ್ಯವಯ್ಯಾ, ಇದುವೇ ಭಾಗ್ಯವಯ್ಯಾ...!' ಎನ್ನುತ್ತಾ ನಾನು ನಲಿದಾಡಿದೆ ಎಂದು ಉದ್ವೇಗಗೊಳ್ಳುವ ಲೇಖಕಿಯ ಮಾತುಗಳನ್ನು ಕೇಳುವಾಗ ಓದುಗರೂ

*PAGE DONATED BY : **SHRI ANANT GANESH BHAT, BANDRA & FAMILY***

ಉದ್ವೇಗಗೊಳ್ಳುವುದರಲ್ಲಿ ಸಂಶಯವಿಲ್ಲ. ಈ ಅಪೂರ್ವ ಅನುಭವವನ್ನು ತಾವೇಕೆ ಪಡೆಯುವ ಪ್ರಯತ್ನ ಮಾಡಬಾರದು? ಎಂದು ಯೋಚಿಸುವುದರಿಂದಲೂ ಹೊರತಾಗಲಾರರು ಎಂದೆನಿಸುತ್ತದೆ.

'ಯಾತ್ರೆಯ ಬಗ್ಗೆ ಸಂಕ್ಷಿಪ್ತ ಮಾಹಿತಿ' ಎಂಬ ಶೀರ್ಷಿಕೆಯಡಿ ಲೇಖಕಿ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಕೈಗೊಳ್ಳಲು ಬಯಸುವ ಪ್ರವಾಸಿಗರಿಗೆ ಚಿಕ್ಕದಾಗಿ ಹಾಗೂ ಚೊಕ್ಕದಾಗಿ ಸಂಪೂರ್ಣ ಮಾಹಿತಿಯನ್ನು ಕೊಡುತ್ತಾ 'ಈ ಯಾತ್ರೆಗೆ ಒಂದು ತಿಂಗಳ ಸಂಪೂರ್ಣಾವಧಿ ಬೇಕು. ವೈದ್ಯರಿಂದ ತಪಾಸಣೆಯಲ್ಲಿ ಪಾಸಾದವರು ಮಾತ್ರ ಈ ಯಾತ್ರೆಗೆ ಅರ್ಹರು. ಅಲ್ಲದೆ, ರಕ್ತದೊತ್ತಡ, ಸಕ್ಕರೆ ಕಾಯಿಲೆ, ಹೃದ್ರೋಗಿಗಳಿಗೆ ಈ ಯಾತ್ರೆ ನಿಷಿದ್ಧ. ಅಲ್ಲದೆ, ಒಬ್ಬ ಪ್ರವಾಸಿಗೆ ತಗಲಬಹುದಾದ ಖರ್ಚು ವೆಚ್ಚವನ್ನು ಬರೆದಿರುತ್ತಾರೆ. ಮುಂದೆಯೂ ಪ್ರವಾಸದ ಮಾಹಿತಿ ನೀಡುತ್ತಾ ಪ್ರತಿಯೊಬ್ಬ ಪ್ರವಾಸಿಯೂ ಇಪ್ಪತ್ತು ಕಿಲೋದಷ್ಟು ಸಾಮಾನು ಕೊಂಡೊಯ್ಯಬಹುದು. ಮೇಲಕ್ಕೆ ಹತ್ತುತ್ತಾ ಹೋದಂತೆ ಹಸಿವೆ ಮತ್ತು ನಿದ್ರೆ ಕಡಿಮೆಯಾಗಬಹುದು. ಅಪಚನ, ಭೇದಿ, ತಲೆನೋವು, ರಕ್ತದೊತ್ತಡ, ಸ್ವಭಾವದಲ್ಲಿ ಸಿಡಿಮಿಡಿ, ಅಸಹನ, ಶ್ವಾಸೋಚ್ಛ್ವಾಸದ ತೊಂದರೆ ಕಾಣಬಹುದು. ಅದಕ್ಕಾಗಿ ಅತ್ಯವಶ್ಯಕ ಮದ್ದು, ಮಾತ್ರೆ ಇತ್ಯಾದಿ ಅವಶ್ಯಕ ವಸ್ತುಗಳನ್ನು ಕೊಂಡೊಯ್ಯಬೇಕು' ಎಂದು ಸಲಹೆಯನ್ನಿತ್ತಿದ್ದಾರೆ.

ಸಾಧ್ಯವಾದಷ್ಟು ಬೇಗ ಆದಷ್ಟು ಭಕ್ತರು ಕೈಲಾಸದ ದರ್ಶನ ಮಾಡಿ ಪುನೀತರಾಗಿ ಎನ್ನುತ್ತಾ ಲೇಖಕಿ ತಮ್ಮ ಕೈಲಾಸನಾಥನ ದರ್ಶನದ ಸವಿಸ್ತಾರ ಮಾಹಿತಿ ನೀಡಿ ಆ ಕೈಲಾಸನಾಥಪತಿಯ ಕಡೆ ಆಕರ್ಷಿತರಾಗಲು ಓದುಗರಿಗೆ ಪ್ರೇರಣೆಯಾಗುತ್ತಿದ್ದಾರೆ ಎನ್ನಬಹುದು.

ಬೆನ್ನುಡಿಯನ್ನು ಬರೆದ ಡಾ. ಸುನೀತಾ ಶೆಟ್ಟಿಯವರು 'ಮುಂಬಯಿಗೆ ಸೋಮಾರಿತನವೆಂದರೆ ಆಗದು. ಹೊಸ ಬಾಳಿಗೆ ಹೊಸ ದಿಕ್ಕನ್ನು ತೆರೆಯುವುದರಲ್ಲಿಯೇ ಅದರ ಬೆಡಗಿದೆ. ಆದ್ದರಿಂದಲೇ ಇಲ್ಲಿಯ ಲೇಖಕರು ಒಳನಾಡಿನ ಲೇಖಕರಿಗಿಂತ ವಿಭಿನ್ನ ರೀತಿಯಲ್ಲಿ ಯೋಚಿಸಬಲ್ಲರು, ಬರೆಯಬಲ್ಲರು ಎನ್ನುತ್ತಾ ಮಮತಾ ರಾವ್ ಅವರ ಈ ಸಾಹಸವನ್ನು ಶ್ಲಾಘಿಸಿದ್ದಾರೆ.'

ಒಟ್ಟಾರೆ ಲೇಖಕಿಯ ಈ ಕೈಲಾಸ ಯಾತ್ರೆ ಒಂದು ಸಾಹಸಗಾಥೆ. ಇದು ಪ್ರತಿಯೊಬ್ಬರಿಗೂ ಅಸಾಧ್ಯ. ಬರೀ ಶಕ್ತಿವಂತನಾಗಿದ್ದರೂ ಆತನಲ್ಲಿ ಮಾನಸಿಕ ಸ್ಥೈರ್ಯ, ಹುಮ್ಮಸ್ಸು, ಲೌಕಿಕತೆ ಇದ್ದರೆ ಮಾತ್ರ ಈ ಯಾತ್ರೆ ಸಾಧ್ಯ. ಅದರಲ್ಲೂ ಮಹಿಳೆಯಾಗಿ ದಿಟ್ಟ ಹೆಜ್ಜೆಯಿಂದ ದೃಢ ನಿರ್ಧಾರದಿಂದ ಮಾನಸದ ತಡಿಯನ್ನು ತಲುಪಿ ಹಿಂತಿರುಗಿದ ಶ್ರೀಮತಿ ಮಮತಾ ರಾವ್ ಅವರು ಮುಂಬಯಿ ಕನ್ನಡಿಗರಿಗೆ ಹೆಮ್ಮೆಯ ಸ್ತ್ರೀಯಾಗಿ ಕಾಣಿಸಿಕೊಳ್ಳುತ್ತಾರೆ. ಬಹುಶಃ ಯಾರನ್ನು ಕೈಲಾಸಾಧಿಪತಿ ಅಲ್ಲಿಗೆ ಕರೆಯುತ್ತಾನೋ ಅವರು ಮಾತ್ರ ಅಲ್ಲಿ ಹೋಗಿ ಪುನಃ ಹಿಂತಿರುಗಿ ಮನೆ ಸೇರಬಲ್ಲರು ಎಂಬುದು ಈ ಲೇಖನವನ್ನು ಓದುವುದರಿಂದ ತಿಳಿಯುತ್ತದೆ.

ಶ್ರೀಮತಿ ಮಮತಾ ರಾವ್ ಅವರು ಈ ಒಂದು ಕಠಿಣ ಯಾತ್ರೆಯಲ್ಲಿ ಗೆದ್ದು ಬಂದಿರುವಾಗ ಇನ್ನುಳಿದ ಬದುಕಿನ ಜಂಜಾಟಗಳು, ಕ್ಲೇಶಗಳು ಅವರಿಗೆ ಸಾಮಾನ್ಯ ಎಂದೆನಿಸಬಹುದು ಎಂಬುದು ನನ್ನ ಅಂಬೋಣ. ಅವರ ಈ ಬರೆಯುವ ಪ್ರವೃತ್ತಿ, ಪ್ರವಾಸದ ಸ್ತ್ರೀಶಕ್ತಿ ಇನ್ನೂ ಮುಂದುವರಿಯಲಿ. ಮುಂಬಯಿಯ ಮಹಿಳಾ ಲೋಕಕ್ಕೆ ಇವರೊಬ್ಬ ಸ್ಫೂರ್ತಿ ತುಂಬಿದ ಮಹಿಳೆಯಾಗಿದ್ದು, ಇವರ ಬದುಕು ಹಸನಾಗಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ.

## Havyaka Welfare Trust - Account Details

Donors may directly remit the amount in below mentioned accounts of Havyaka Welfare Trust, Kalina, Santacruz (E), Mumbai - 400 098.

| | | | |
|---|---|---|---|
| 1. | In favour of | = | Havyaka Welfare Trust |
| | Bank | = | Corporation bank |
| | Branch | = | Santacruz (E) Mumbai |
| | A/c. No. | = | CLSB 01010028 |
| | IFSC Code | = | CORP 0000499 |
| 2. | In favour of | = | Havyaka Welfare Trust Women Welfare Cell |
| | Bank | = | Corporation Bank |
| | Branch | = | Santacruz (E), Mumbai |
| | A/c. No. | = | CLSB01070031 |
| | IFSC Code | = | CORP 0000499 |


UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*


*PAGE DONATED BY :* ***SMT. KALA BHAGWAT, KHARGAR IN MEMORY OF MOTHER LATE SMT. GOURI BHAT***

# ಸಂಜಯನ ಪತ್ರ

✍ **ಸದಾನಂದ ಹೆಗಡೆಕಟ್ಟೆ**

ಆಪ್ತ ಮಿತ್ರ ಸಂಜಯ ಮೂಡಬಿದ್ರಿಯ ಆಳ್ವಾಸ್ ಕಾಲೇಜಿನಲ್ಲಿ ಫಸ್ಟ್ ಕ್ಲಾಸ್‌ನಲ್ಲಿ ಬಿ. ಕಾಂ ಮುಗಿಸಿದ ಬಳಿಕ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಕಲ ಸೌಕರ್ಯ, ಅವಕಾಶ ಅಂದರೆ ಎಂ.ಕಾಂ., ಎಂ. ಬಿ. ಎ. ಮಾಡಲು ಅನುಕೂಲವಿದ್ದರೂ ಶಿಕ್ಷಣ ಮುಂದುವರಿಸಲಿಲ್ಲ. ತಂದೆ ಶ್ರೀಮಂತ ವ್ಯಾಪಾರಿ. ತಂದೆಯ ವ್ಯಾಪಾರವನ್ನು ಮಾಡಲಿಚ್ಛಿಸಲಿಲ್ಲ.

'ನನ್ನ ಬಹುದಿನಗಳ ಕನಸನ್ನು ನನಸನ್ನಾಗಿ ಮಾಡುತ್ತೇನೆ. ದೇಶದ ಉದ್ದಗಲ ಸಂಚರಿಸುತ್ತೇನೆ. ನಗರ, ಗ್ರಾಮಗಳಲ್ಲಿ ಸಂಚರಿಸಿ, ಅಲ್ಲಿಯ ಶ್ರೀ ಸಾಮಾನ್ಯನನ್ನು ಭೇಟಿಯಾಗುತ್ತೇನೆ. ಭಾರತ ಸ್ವತಂತ್ರವಾಗಿ ಸುಮಾರು ಏಳು ದಶಕಗಳಾದರೂ ಇನ್ನೂ ಯಾಕೆ ಇಲ್ಲಿನ ಬಡತನ ದೂರಾಗಲಿಲ್ಲ. ಜನರೇಕೆ ಶಿಕ್ಷಿತರಾಗಿಲ್ಲ. ಸಿರಿವಂತರ ಹಾಗೂ ಜನಸಾಮಾನ್ಯರ ನಡುವಿನ ಅಂತರವೇಕೆ ಹೆಚ್ಚಾಗುತ್ತಿದೆ. ದೇಶದ ಸಂಪತ್ತು ಕೆಲವೇ ಕೆಲವು ಜನರಲ್ಲೇಕೆ ಸಂಗ್ರಹವಾಗುತ್ತಿದೆ ಎಂಬುದರ ಕುರಿತು ಒಂದು ಮಹಾಪ್ರಬಂಧ ರಚಿಸಿ, ರಾಜಕಾರಣಿಗಳಿಗೆ, ಬುದ್ಧಿಜೀವಿಗಳಿಗೆ, ವಿ. ವಿ. ಯ ಪ್ರಾಧ್ಯಾಪಕರಿಗೆ ವಿತರಿಸುತ್ತೇನೆ. ದೇಶಸೇವೆಯು ಒಂದು ಅಳಿಲ ಸೇವೆ ಎಂದು ತಿಳಿಯುತ್ತೇನೆ. ಈ ನನ್ನ ಕಾರ್ಯಕ್ಕೆ, ದೇಶ ಸಂಚಾರಕ್ಕೆ ತಂದೆಯವರಿಂದಾಗಲಿ, ಶ್ರೀಮಂತರಿಂದಾಗಲಿ, ಬಂಧು ಬಳಗ, ಸ್ನೇಹಿತರಿಂದಾಗಲಿ ಧನ ಸಹಾಯ ಅಪೇಕ್ಷಿಸುವುದಿಲ್ಲ. ನನಗೆ ನನ್ನದೇ ಆದ ಯೋಜನೆ ಇದೆ. ಒಂದು ಗ್ರಾಮ, ನಗರಕ್ಕೆ ಭೇಟಿಯಿತ್ತಾಗ, ಅಲ್ಲಿನ ಪತ್ರಿಕೆಯಲ್ಲಿ ನನ್ನ ದೇಶ ಸಂಚಾರದ ಉದ್ದೇಶ ಕುರಿತು ಜಾಹೀರಾತು ಪ್ರಕಟಿಸಿ, ಕೆಲಸ ನೀಡಲು ವಿನಂತಿಸುತ್ತೇನೆ.

ನನ್ನ ಉದ್ದೇಶ ನಿಸ್ವಾರ್ಥವಾದುದರಿಂದ ನನಗೆ ಕೆಲಸ ದೊರೆಯುತ್ತದೆ. ಯಾವುದೇ ಕೆಲಸವಿರಲಿ, ಅದು ರೈಲು ನಿಲ್ದಾಣ, ಬಸ್‌ಸ್ಟಾಂಡಿನಲ್ಲಿ ಹಮಾಲಿ, ಕೂಲಿ ಕೆಲಸ, ಹೊಟೇಲ್‌ನಲ್ಲಿ ತಿಂಡಿ, ಟೀ ಸಪ್ಲೈ ಮಾಡುವ ಕೆಲಸ, ದೋಬಿ ಅಂಗಡಿಯಲ್ಲಿ ಇಸ್ತ್ರಿ ಹಾಕುವ ಕಾರ್ಯ ಈ ಎಲ್ಲ ಕೆಲಸಗಳನ್ನು ನಾನು ಪ್ರಾಮಾಣಿಕವಾಗಿ ಮಾಡಿ, ಹಣ ಸಂಗ್ರಹಿಸಿ ಮುಂದಿನ ಪ್ರಯಾಣಕ್ಕೆ ಸಿದ್ಧನಾಗುತ್ತೇನೆ. ಜನರನ್ನು ಭೇಟಿಯಾಗಿ, ಅವರ ಸಮಸ್ಯೆ ಅರಿಯಲು ಯತ್ನಿಸುತ್ತೇನೆ ಎಂದು ಸಂಜಯ ತನ್ನ ಪ್ರಯಾಣ ಪ್ರಾರಂಭಿಸುವ ಮೊದಲು ನನಗೆ ಹೇಳಿದ್ದ.

❊❊❊

ಸುಮಾರು ಐದು ವರ್ಷಗಳ ಬಳಿಕ ಸಂಜಯ ಮುಂಬಯಿಯ ಬೊರಿವಲಿಯಲ್ಲಿ ಗೆಳೆಯರೊಬ್ಬರ ಮನೆಯಿಂದ ಬರೆದ ಪತ್ರ ನನಗೆ ಈಚೆಗೆ ಬಂತು. ಪತ್ರ ಓದಿದ ಬಳಿಕ ನನಗೆ ತುಂಬ ಸಂತಸವಾಯಿತು. ಆತ ತಾನು ಈ ಐದು ವರ್ಷಗಳಲ್ಲಿ ಭೇಟಿ ನೀಡಿದ ರಾಜ್ಯಗಳ, ಅವುಗಳಲ್ಲಿನ ನಗರ, ಗ್ರಾಮವಾಸಿಗಳನ್ನು ಭೇಟಿಯಾಗಿ ಮಾಹಿತಿ ಪಡೆದಿದ್ದ.

ಮೊಟ್ಟ ಮೊದಲು ಸುಶಿಕ್ಷಿತರ ರಾಜ್ಯ ಎಂದು ಹೇಳಲಾದ ಕೇರಳಕ್ಕೆ ಹೋಗಿದ್ದ. ಅಲ್ಲಿನ ಪ್ರಮುಖ ನಗರಗಳಾದ ಎರ್ನಾಕುಲಂ, ಕೊಲ್ಲಂ, ಕೊಟ್ಟಾಯಂ, ಕೊಝಿಕೊಡೆ, ತ್ರಿಚೂರ ಹಾಗೂ ರಾಜಧಾನಿ ತಿರುವನಂತಪುರಂಗೆ ಅಲ್ಲಿನ ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿ ಮಲೆಯಾಳಿ ಭಾಷೆಯಲ್ಲಿಯೇ ಪ್ರಶ್ನೆ ಕೇಳಿ ಜವಾಬು ಪಡೆದಿದ್ದ.

ಬಳಿಕ ತಮಿಳುನಾಡು ಪ್ರವೇಶಿಸಿದ ಸಂಜಯ ಅಲ್ಲಿ ಕೆಲವು ದಿನವಿದ್ದು ನೌಕರಿ ಮಾಡಿ ಹಣ ಸಂಗ್ರಹಿಸಿದ. ತಮಿಳು ಭಾಷೆಯಲ್ಲಿ ಮಾತನಾಡಲು ಕಲಿತ. ಚೆನ್ನೈ, ಕೊಯಂಬತ್ತೂರು, ದಿಂಡಿಗಲ್, ಕಾಂಚೀಪುರಂ, ಕನ್ಯಾಕುಮಾರಿ, ಮಧುರೈ, ನೀಲಗಿರಿ, ರಾಮನಾಥಪುರಂ, ತಿರುಚುನಾಪಳ್ಳಿ ಇತ್ಯಾದಿ ನಗರಗಳಿಗೆ ಭೇಟಿ ನೀಡಿದ. ಅಲ್ಲಿನ ಕೆಲವು ಗ್ರಾಮಗಳಿಗೆ ತೆರಳಿ ಜನರೊಂದಿಗೆ ಸಂವಹನ, ಸಂವಾದಗಳ ಮೂಲಕ ಅಗತ್ಯವಾದ ಮಾಹಿತಿ ಸಂಗ್ರಹಿಸಿದ.

ನಂತರ ಆಂಧ್ರಪ್ರದೇಶಕ್ಕೆ ತೆರಳಿದ ಸಂಜಯ ಅಲ್ಲಿನ ಪ್ರಮುಖ ನಗರಗಳಾದ ಅನಂತಪುರ, ಚಿತ್ತೂರ, ಕರ್ನೂಲ, ಗುಂಟೂರ, ನೆಲ್ಲೂರು, ವಿಶಾಖಪಟ್ಟಣ, ವಿಜಯ ನಗರಂ ಈ ನಗರಗಳಲ್ಲಿ ಹಾಗೂ ಇವುಗಳ ಕೆಲ ಗ್ರಾಮಗಳಲ್ಲಿ ಸಂಚರಿಸಿ ಜನರನ್ನು ಭೇಟಿಯಾದ. ಪ್ರಶ್ನೆ ಕೇಳಿ ಮಾಹಿತಿ ಸಂಗ್ರಹಿಸಿದ. ಕೃಷಿಕರೊಂದಿಗೆ, ಕಾರ್ಮಿಕರೊಂದಿಗೆ ಮಾತನಾಡಿದ. ಮೂರ್‍ನಾಲ್ಕು ಗ್ರಾಮಗಳಲ್ಲಿ ವಾಸಿಸಿದ. ತಾನು ಬಂದ ಉದ್ದೇಶವನ್ನು ಅವರ ಭಾಷೆಯಲ್ಲಿ ತಿಳಿಸಿದ.

ಬಳಿಕ ನೆರೆಯ ನೂತನ ರಾಜ್ಯ ತೆಲಂಗಾಣದಲ್ಲಿ ಹೈದರಾಬಾದ್, ಕರೀಂ ನಗರ, ಮೆಹಬೂಬ ನಗರ, ಮೇಡಕ, ನಲ್ಗೊಂಡ, ರಂಗಾರೆಡ್ಡಿ, ವರಾಂಗಲ್ ನಗರಗಳಿಗೆ ಅಲ್ಲಿನ ಕೆಲವು ಗ್ರಾಮಗಳಿಗೆ ಭೇಟಿ ನೀಡಿದ. ಗ್ರಾಮದ ಪ್ರಮುಖರನ್ನು ಕಂಡು ಮಾತನಾಡಿದ. ಎರಡು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳನ್ನು, ಶಿಕ್ಷಕರನ್ನು ಭೇಟಿಯಾಗಿ ಮಾತನಾಡಿದ. ತೆಲುಗು ಕನ್ನಡಕ್ಕೆ ಹತ್ತಿರದ ಭಾಷೆ. ಸಂವಹನ ಸುಲಭವಾಯ್ತು ಎಂದು ಸಂಜಯ ಪತ್ರದಲ್ಲಿ ಬರೆದಿದ್ದ.

ಸಂಜಯನ ಮುಂದಿನ ಪಯಣ ಛತ್ತೀಸಗಢ. ಅಲ್ಲಿನ ಭಾಷೆ ಹಿಂದಿ. ಸಂಜಯ ರಾಷ್ಟ್ರಭಾಷೆ ಹಿಂದಿಯಲ್ಲಿ ವಿಶಾರದ ಪಾಸು ಮಾಡಿದ್ದ. ಹಿಂದಿಯಲ್ಲಿ ಚೆನ್ನಾಗಿ ಮಾತನಾಡುತ್ತಿದ್ದ. ಛತ್ತೀಸಗಡದಲ್ಲಿ ಬಸ್ತಾದ, ಜನಪುರ, ಕಬೀರಧಾಮ, ಕೊರ್ಬಾ, ನಾರಾಯಣಪುರ, ರ್‍ಯಾಪುರ ಇತ್ಯಾದಿ ನಗರಗಳಿಗೆ ಅಲ್ಲಿನ ನಾಲ್ಕು ಗ್ರಾಮಗಳಿಗೆ ಭೇಟಿಯಿತ್ತು ಜನರೊಂದಿಗೆ ವಿಚಾರ ವಿನಿಮಯ ಮಾಡಿದ ಬಳಿಕ, ಸಂಜಯ ಒಡಿಸ್ಸಾ ಪ್ರವೇಶಿಸಿದ. ಅಲ್ಲಿ ಭುವನೇಶ್ವರ, ಕಟಕ, ಬ್ರಹ್ಮಪುರ, ರೂರ್‌ಕೆಲಾ, ಪುರಿ ನಗರಗಳಲ್ಲಿ ಹಾಗೂ ಕೆಲ ಗ್ರಾಮಗಳಲ್ಲಿ ಸಂಜಯ ಸಂಚರಿಸಿದ. ನಾಗರಿಕರೊಂದಿಗೆ ವಿಚಾರ ವಿನಿಮಯ ಮಾಡಿದ. ಪುರಿಯ ರಥಯಾತ್ರೆ ವೀಕ್ಷಿಸುವ ಹಾಗೂ ಕೊಣಾರ್ಕ್ ಸೂರ್ಯ ದೇವಸ್ಥಾನಕ್ಕೆ ಭೇಟಿ ನೀಡಿದ್ದು ನನ್ನ ಸ್ಮೃತಿ ಪಟಲದಲ್ಲಿ ಸದಾ ಹಸಿರಾಗಿರುತ್ತದೆ ಎಂದು ಸಂಜಯ ಬರೆಯುತ್ತಾನೆ.

ಗೆಳೆಯ ನಾನೀಗ ಮುಂಬಯಿ ಹೊರವಲಯದ ಬೊರಿವಲಿಯಲ್ಲಿ ಸಂಬಂಧಿಕರೊಬ್ಬರ ಮನೆಯಲ್ಲಿ ಕೆಲದಿನ ವಿಶ್ರಾಂತಿಗಾಗಿ ಬಂದಿದ್ದೇನೆ.

ಬೊರಿವಲಿ ಸುಂದರವಾದ ಉಪನಗರ. ಬೊರಿವಲಿಯಲ್ಲಿನ ನ್ಯಾಶನಲ್ ಪಾರ್ಕ್ ನೋಡಿದ ಬಳಿಕ ಉತ್ತರ ಭಾರತದ ಪ್ರಯಾಣ. ಮುಂಬಯಿ ಕುರಿತು ನಾಲ್ಕು ಮಾತು ಹೇಳುವುದಾದರೆ ಭಾರತವನ್ನರಿಯಲು ಇಚ್ಛಿಸುವವರು ಮುಂಬಯಿಯಲ್ಲಿ ಕೆಲಕಾಲ ಕಳೆಯಬೇಕು. ಇದು ಮಿನಿ ಭಾರತ. ಜನಸಂಖ್ಯೆ ಸುಮಾರು ಒಂದೂವರೆ ಕೋಟಿ. ಇಲ್ಲಿ ಮನೆ ಇಲ್ಲದೇ ರಾತ್ರಿ ರಸ್ತೆಯಲ್ಲಿ ಮಲಗುವವರಿದ್ದಾರೆ. ನಲ್ವತ್ತು ಐವತ್ತು ಮಹಡಿಯ ಮನೆಯಲ್ಲಿ ವಾಸಿಸುವ, ಈಜುಕೊಳ, ಹೆಲಿಕಾಪ್ಟರ್‌ಮಹಡಿಯ ಮೇಲೆ ಇಳಿಯಲು ಅನುಕೂಲವಿರುವ ಕುಬೇರರು ಇಲ್ಲಿದ್ದಾರೆ. ಉಳ್ಳವರ-ಇಲ್ಲದವರ ನಡುವಿನ ಅಂತರ ತುಂಬ ಗೋಚರಿಸುವ ಮಹಾನಗರ ಮುಂಬಯಿ ಎಂದರೆ ಅತಿಶಯವಾಗದು.

*PAGE DONATED BY :* ***SHRI S. M. HEGDE,*** *SANTACRUZ*

ಇನ್ನು ಕಳೆದ ಐದು ವರ್ಷಗಳ ಸಂಚಾರದ ಅನುಭವ ಸಂಕ್ಷಿಪ್ತವಾಗಿ ಹೇಳುತ್ತೇನೆ. ಭಾರತದಲ್ಲಿ ಎರಡು ದೇಶಗಳಿವೆ ಎಂದರೆ ಅಚ್ಚರಿಯಾಗಬಹುದು. ಒಂದು ಶ್ರೀಮಂತರ ಭಾರತ. ಇನ್ನೊಂದು ಇಲ್ಲದವರ ಅಂದರೆ ಗರೀಬರ ಭಾರತ. ಸಿರಿವಂತರು ವಾಸಿಸುವ ಭಾರತದಲ್ಲಿ ಸಕಲ ಸೌಕರ್ಯ ಇದ್ದರೆ ಬಡವರು ವಾಸ ಮಾಡುವ ಪ್ರದೇಶಗಳಲ್ಲಿ ಯೋಗ್ಯ ರಸ್ತೆಗಳಿಲ್ಲ. ಕಕ್ಕುಸುಗಳಿಲ್ಲ. ಸ್ತ್ರೀ, ಪುರುಷರಿಗೆ ಬಹಿರ್ದೆಸೆಗಳಿಗೆ ಬಯಲು ಶೌಚಾಲಯವೇ ಗತಿ. ಮೂಲಭೂತ ಸೌಕರ್ಯ ಹಾಗೂ ಯುವಕರಿಗೆ ಉದ್ಯೋಗ ಲಭಿಸಲು ಜನಪ್ರತಿನಿಧಿಗಳು ಪ್ರಾಮಾಣಿಕವಾಗಿ ಕಾರ್ಯ ನಿರತರಾಗಬೇಕಾಗಿದೆ.

ಮುಗಿಸುವ ಮುನ್ನ ನಾನು ಹೇಳಲಿಚ್ಛಿಸುವುದೇನೆಂದರೆ, ಈ ದೇಶದ ಶಾಸಕರು, ನಾಗರಿಕರು ಪ್ರಾಮಾಣಿಕರಾಗಬೇಕು. ಶಿಸ್ತುಬದ್ಧರಾಗಿ ಕ್ರಿಯಾಶೀಲರಾಗಬೇಕು. ಆಗ ಭಾರತ ಆರ್ಥಿಕವಾಗಿ ಬಲಗೊಳ್ಳುತ್ತದೆ. ಪ್ರಾತಃಸ್ಮರಣೀಯ ಭಾರತ ರತ್ನ ಸರ್ ಮೋಕ್ಷ ಗುಂಡಂ ವಿಶ್ವೇಶ್ವರಯ್ಯನವರು ಹೇಳಿದಂತೆ ಭಾರತವು ಅತ್ಯಂತ ದಕ್ಷ, ಬಲಾಢ್ಯ, ಗುಣ ಸಂಪನ್ನ ರಾಷ್ಟ್ರವಾಗಿ ವಿಶ್ವದಲ್ಲಿ ಗೌರವವನ್ನು ಪ್ರತಿಷ್ಠಾಪಿಸಬೇಕಾದರೆ ಪ್ರಜೆಗಳು ಶಿಕ್ಷಿತರಾಗಬೇಕು. ಗುಣಸಂಪನ್ನತೆ ಮತ್ತು ಕಾರ್ಯಕ್ಷಮತೆಗಳು ಬದುಕಿನ ನಿತ್ಯ ಮಂತ್ರಗಳಾಗಬೇಕು. ದೇಶಾಭಿಮಾನದೊಂದಿಗೆ ಉದ್ಯಮಶೀಲರಾಗಬೇಕು. ಮೌಢ್ಯ, ಮತಾಂಧತೆಯಿಂದ ಮುಕ್ತರಾಗಿ ಐಕ್ಯಮತದ ಬದುಕಿನಲ್ಲಿ ವಿಶ್ವಾಸವಿಡಬೇಕು.

ಇನ್ನೊಂದು ವೈಯಕ್ತಿಕ ವಿಚಾರ ಹೇಳಲಿಚ್ಛಿಸುತ್ತೇನೆ. ಕಾಂದಿವಲಿಯ ಬ್ಯಾಂಕ್ ಒಂದರಲ್ಲಿ ನೌಕರಿ ಮಾಡುತ್ತಿರುವ ಪರಿಚಿತ ಕನ್ಯೆ ಕಮಲಾಕ್ಷಿಯನ್ನು ಕಳೆದ ವಾರ ಆಪ್ತ ಕೆಲ ಮಿತ್ರರ ಉಪಸ್ಥಿತಿಯಲ್ಲಿ ದೇವಸ್ಥಾನದಲ್ಲಿ ಹೂಹಾರ ವಿನಿಮಯಿಸಿ ಮದುವೆಯಾಗಿದ್ದೇನೆ ಎಂದು ತಿಳಿಸಲು ಸಂತಸವಾಗುತ್ತಿದೆ. ನಿನ್ನ ಶುಭಾಶಯ ಲಭಿಸುತ್ತದೆ ಎಂಬ ಭರವಸೆ ಇದೆ.

ನಿನ್ನ ಪ್ರೀತಿಯ ಸಂಜಯ

---

# ಸಂಕ್ರಾಂತಿ

– ರವಿ

ಹಸನು ಮಾಡಿದ ಭೂಮಿಯ ನೊಗಕೆ ಕಟ್ಟಿ ಜೋಡಿ ಎತ್ತು
ಸಾಲ ಮಾಡಿ ಒಳ್ಳೆಯ ಫಸಲ ನಿರೀಕ್ಷೆ ಮಾಡಿದ ಬೀಜವ ಬಿತ್ತು

ಮಳೆಗಾಗಿ ಕಾದ ನೋಡುತ ಆಗಸ
ಅದ್ಯಾಕೋ ವರುಣದೇವ ತೋರಿದ ಮುನಿಸ

ಮೊಳಕೆ ಒಡೆಯದೇ ಬಿತ್ತಿದ ಬೀಜ ಹೋಯ್ತು ಕಮರಿ
ಒಳಗೊಳಗೆ ಯೋಚನೆಗೆ ಬಿದ್ದ ಮಾಡಿದ ಕೈಸಾಲಕೆ ಹೆದರಿ

ಕೈಯಲ್ಲಿ ಹಣವಿಲ್ಲ ಹಬ್ಬ ಆಚರಿಸಲು
ದನ-ಕರುಗಳಿಗೆ ಸಿಗುತಿಲ್ಲ ತಿನ್ನಲು ಹುಲ್ಲು

ಸಿಕ್ಕ ಬೆಲೆಗೆ ಪ್ರೀತಿಯ ಜಾನುವಾರಗಳ ಮಾರಿ
ಗುಳೆ ಹೊರಟ ಬೆಂಗಳೂರು, ಗೋವಾ ಕಡೆ ತೊರೆದು ತನ್ನ ಕೇರಿ

ಅನ್ನದಾತನ ಮನೆಯಲ್ಲಿ ತುಂಬಿದರೆ ಧನಧಾನ್ಯ ಸುಖ - ಶಾಂತಿ
ಗೆಳೆಯರೇ ನಿಜವಾಗಿ ಅದಲ್ಲವೇ Happy Sankranti

★★★

# ಬೆಳ್ಳಿ ಬೆಳಕು

– ಜಿ. ಜಿ. ಹೆಗಡೆ, ಬಾಳಗೋಡ

ಮೋಡಗಳ ಮರೆಯಿಂದ
ಆಡಾಡಿ ಬಂದಂತೆ
ಮುದದಿಂದ ಚಂದಿರನು
ಮನವ ಗೆದ್ದ

ಬಾನಗಲ ಬೆಳಕಿಟ್ಟು
ಭುವಿಗೆಲ್ಲ ಹರಿಬಿಟ್ಟು
ಅಮೃತದ ಸುಧೆ ನೀಡಿ
ಬೆಳಕನಿಟ್ಟ

ದುಡಿಯುವ ದೇಹಗಳ
ದಣಿವೆಲ್ಲ ಮರೆಯಾಗಿ
ದನಿಗೂಡಿ ಮೊಳಗಿತ್ತು
ಇಳೆಯಗಾನ

ಬೆಳ್ಳಿ ಬೆಳಕಿನ ಶರಧಿ
ಬಾನು ಭುವಿ ಚುಂಬಿಸುವ
ರಸ ನಿಮಿಷ ಎದುರಾಯ್ತು
ಸವಿಯ ಮಧುಪಾನ ॥

★★★


**ವಧು ಬೇಕಾಗಿದ್ದಾಳೆ**

ಕಾಸರಗೋಡು ಮೂಲದ, ಬೆಂಗಳೂರಲ್ಲಿ ಸ್ವಂತ ಮನೆಯನ್ನು ಹೊಂದಿರುವ, ಕಾಶ್ಯಪ ಗೋತ್ರದ, ಕರ್ಕಾಟಕ ರಾಶಿಯ, ಆಶ್ಲೇಷ ನಕ್ಷತ್ರದ 30.12.1985 ರಂದು ಜನಿಸಿದ 6'2" ಎತ್ತರದ ಪ್ರತಿಷ್ಠಿತ ವಿದ್ಯಾ ಸಂಸ್ಥೆಯಿಂದ ಬಿಇ ಪದವೀಧರನಾಗಿ ಹೆಸರಾಂತ Two Wheeler ಕಂಪೆನಿಯ Dealership ಪಡೆದು ಶೋರೂಮ್ ನಡೆಸುತ್ತಿರುವ ಕೃಷಿಕ Machinery Business ನಲ್ಲಿರುವ ವಿದ್ಯಾವಂತ ಕುಟುಂಬದ ವರನಿಗೆ, ತತ್ಸಮಾನ ವಿದ್ಯಾರ್ಹತೆ, ಉದ್ಯೋಗದಲ್ಲಿರುವ ಸುಂದರ ವಧು ಬೇಕಾಗಿದ್ದಾಳೆ.

ಆಸಕ್ತರು ದಯಮಾಡಿ ಭಾವಚಿತ್ರ, ಜಾತಕದೊಂದಿಗೆ ಸಂಪರ್ಕಿಸಿರಿ.
govindbhatk@gmail.com • Mob.: 98450 49831

**Matrimonial**

Well established Havyaka Pharmacist, 41 years, 5.6' height owning two large Pharmacies in Perth, employing over 25 people, seeks an attractive qualified bride under 37 years and above 5.2' in height. Please respond with details of date, time and place of birth and some photographs to **hegdeperth@gmail.com**

Local contact : 9820154378/ 022-24228537

# ಪ್ರಯಾಣ

– ಶ್ರೀಮತಿ ಸರಸ್ವತಿ ಪಿ. ಭಟ್ಟ, ಕಡತೋಕ

ಮರೆತರೊಂದಿಷ್ಟು ಹೊತ್ತಲಿ ದೇಹವನ್ನು
ಅರಿತುಕೊಳ್ಳುವೆವು ನಾವಾರೆಂಬುದನ್ನು
ಬೆರೆತು ಉಸಿರಿನಲಿ ನೋಡಂತರಾತ್ಮವನು
ಸರಸವಾಡುವ ಜಗದ ಮಾತಾಪಿತರನ್ನು

ಕರೆವಳು ಪ್ರಕೃತಿ ಹತ್ತಿರಕೆ ಪುರುಷರನ್ನು
ಸೆರೆಹಿಡಿದು ನಡೆಸುವಳು ಸೃಷ್ಟಿ ಕಾರ್ಯವನು
ಬಾರೆ ಜೊತೆಗೆನ್ನುತಿಹ ಪುರುಷ ಪ್ರಕೃತಿಯನು
ಶಿರದ ಸಹಸ್ರಾರದ ಮೇಲಕೊಯ್ಯುವನು

ತೋರುವೆನು ನಿನಗೆ ನಾ ಲೋಕವನ್ನು
ಸೇರಿ ಪಡೆಯುವ ಶಾಶ್ವತದ ಸುಖವನ್ನು
ಪುರು ಪ್ರಾಣವು ಪ್ರಕೃತಿಯಾಗಿಹಳಪಾನ
ಇಬ್ಬರ ಮಿಲನ ತೋರುವದು ಧ್ಯಾನವನ್ನು

ತೆರೆಯಾಚೆ ತೋರುವಳು ಪ್ರಕೃತಿ ರಾಗವನು
ಪುರುಷ ತೆರೆಯುವನು ವಿರಾಗದ ಬಾಗಿಲನ್ನು
ಆರು ಅರಿಗಳು ನಡೆಸುವರು ಸಮರವನ್ನು
ಅರಿಯಂತೆ ಕೆಡಹುವರು ಆತ್ಮನನ್ನು

ಗುರಿಯದುವೆ ಆತ್ಮನಿಗೆ ತೊರೆದು ಭುವಿಯನ್ನು
ಸೇರಲಿಕೆ ಪಯಣವದು ಭೂಲೋಕವನ್ನು
ಉಸಿರು ಕಲಿಸುವದು ಬದುಕಿನ ಹಾರವನ್ನು
ರಾಗ ವೈರಾಗ್ಯಗಳ ಹೋರಾಟವನ್ನು

★★★

## ಖಾದ್ಯ ಕೈಗನ್ನಡಿ

### ಬಾಳೆ ಕುಂಡ್ಗೆ ಪಲ್ಯ



**ಬೇಕಾಗುವ ಸಾಮಾಗ್ರಿ :** 4 ಬಾಳೆ ಕುಂಡ್ಗೆ, ಸಾಸಿವೆ 1 ಟೀ.ಚ, ರುಚಿಗೆ ಉಪ್ಪು, ಎಣ್ಣೆ 8-10 ಟೀ. ಚ., ಹುಳಿಪುಡಿ (ಆಮ್‌ಚೂರ್) ಸ್ವಲ್ಪ, ಕಡಲೆಬೇಳೆ ಮಸಾಲೆ ಅರ್ಧ ಕಪ್, ಕಾಯಿ ತುರಿ ಒಂದು ಕಪ್, ಅಚ್ಚಕಾರದ ಪುಡಿ 1 ಟೀ. ಚ, ಇಂಗು ಸ್ವಲ್ಪ, ಅರಶಿಣ ಸ್ವಲ್ಪ.

**ಬೇಕಾಗುವ ಸಾಮಾಗ್ರಿ :** ಕಡಲೆಬೇಳೆ 1 ಕಪ್, ಸಾಸಿವೆ 2 ಟೀ.ಚ., ಜೀರಿಗೆ 1 ಟೀ.ಚ., ಮೆಂತೆ 1 ಟೀ. ಚ., ಕೊತ್ತಂಬರಿ ಬೀಜ 2 ಟೀ.ಚ., ಇಂಗು ಸ್ವಲ್ಪ, ಬ್ಯಾಡಗಿ ಮೆಣಸು 6-8. ಇವುಗಳನ್ನು ಎಣ್ಣೆ ಹಾಕಿ ಚೆನ್ನಾಗಿ ಹುರಿದು ಪುಡಿ ಮಾಡಿ ಇಡಿ.

**ಮಾಡುವ ವಿಧಾನ :** ಒಂದು ಪಾತ್ರೆಗೆ ಎರಡು ಗ್ಲಾಸ್ ನೀರು ಮಜ್ಜಿಗೆ (ಬಟರ್ ಮಿಲ್ಕ್)ಯನ್ನು ಹಾಕಿ, ಈಗ ಬಾಳೆ ಕುಂಡ್ಗೆಯನ್ನು ತೆಗೆದುಕೊಂಡು ಅದರ ಮೇಲಿನ ಐದಾರು ಸಿಪ್ಪೆಯನ್ನು ತೆಗೆದುಹಾಕಿ. ಒಳಗಿನ ಬಿಳಿಭಾಗವನ್ನು ಚಿಕ್ಕದಾಗಿ ಹೆಚ್ಚಿ, ಮಜ್ಜಿಗೆ ನೀರಿಗೆ ಹಾಕಿ ಚೆನ್ನಾಗಿ ತೊಳೆದು, ಪೂರ್ಣ ನೀರನ್ನು ತೆಗೆಯಿರಿ (ಹಿಂಡಿ). ಈಗ ಒಂದು ಪಾತ್ರೆಯಲ್ಲಿ ಎಣ್ಣೆ ಹಾಕಿ ಬಿಸಿ ಮಾಡಿ ಸಾಸಿವೆ, ಇಂಗು, ಅರಿಶಿಣ, ಅಚ್ಚಕಾರದ ಪುಡಿ (ಒಣಮೆಣಸಿನ ಪುಡಿ) ಹಾಕಿ ಚಟಾಪಟಾಯಿಸಿ ಹೆಚ್ಚಿದ ಬಾಳೆಹೂವನ್ನು ಹಾಕಿ ಚೆನ್ನಾಗಿ ಹುರಿಯಿರಿ. ನಂತರ ಉಪ್ಪು ಹಾಕಿ ಹುಳಿಪುಡಿ ಹಾಕಿ ಮತ್ತೆ ಸ್ವಲ್ಪ ಹುರಿದು ಇಳಿಸಿ. ಆಮೇಲೆ ಕಡಲೆಬೇಳೆ ಮಸಾಲೆಪುಡಿ ಮತ್ತು ಕಾಯಿತುರಿ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ. ಈಗ ಸವಿಯಲು ಸಿದ್ಧ ಬಾಳೆಕುಂಡ್ಗೆ ಪಲ್ಯ. ಈ ಪಲ್ಯ ಅನ್ನದ ಜೊತೆ ಚೆನ್ನಾಗಿರುತ್ತೆ.

★★★

## ಧನ ಸಹಾಯ ಕೋರಿ ಮನವಿ

ಉತ್ತರ ಕನ್ನಡ ಜಿಲ್ಲೆಯ ಹಳ್ಳಿಯಲ್ಲಿ ವಾಸಿಸುವ ಒಂಭತ್ತು ವರ್ಷದ ಹವ್ಯಕ ಬಾಲಕಿಯೊಬ್ಬಳು ಆಟ ಆಡುವಾಗ ಆಕಸ್ಮಿಕವಾಗಿ ಬೆಂಕಿಯ ಅನಾಹುತಕ್ಕೆ ಸಿಲುಕಿ ತನ್ನ ದೇಹ, ಕೈಕಾಲುಗಳನ್ನು ಸುಟ್ಟುಕೊಂಡಿರುತ್ತಾಳೆ. ಅವಳ ವೈದ್ಯಕೀಯ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಗೆ ಈಗಾಗಲೇ ನಾಲ್ಕು ಲಕ್ಷ ರೂಪಾಯಿಗೆ ಮೀರಿ ಖರ್ಚಾಗಿದೆ. ಅಲ್ಲದೇ ಮುಂದಿನ ವೈದ್ಯಕೀಯ ಹಾಗೂ ಶಸ್ತ್ರಚಿಕಿತ್ಸೆಗೆ ಸುಮಾರು ಎರಡು ಲಕ್ಷ ರೂಪಾಯಿ ಬೇಕಾಗಬಹುದೆಂದು ವೈದ್ಯರು ಅಂದಾಜು ಮಾಡಿದ್ದಾರೆ. ತೀರಾ ಬಡ ಕುಟುಂಬದ ಈ ಹುಡುಗಿಯ ತಂದೆ-ತಾಯಿಯರಿಗೆ ಈ ವೆಚ್ಚವನ್ನು ಭರಿಸಲು ಕಷ್ಟವಾಗುತ್ತಿರುವ ಕಾರಣ ಸಹೃದಯಿ ದಾನಿಗಳು ಸಹಾಯ ಹಸ್ತ ನೀಡಿ ಧನ ಸಹಾಯ ಮಾಡಬೇಕೆಂದು ಕೋರಿಕೆ. ಸಹಾಯ ಮಾಡಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ. ಹವ್ಯಕ ವೆಲ್ಫೇರ್ ಟ್ರಸ್ಟಿನ ಮೂಲಕ ಡೊನೇಶನ್ ನೀಡಿ 80G ಯ ಪ್ರಯೋಜನವನ್ನು ಕೂಡ ಪಡೆದುಕೊಳ್ಳಬಹುದು.

Contact No. 022- 26652591,

**HAVYAKA WELFARE TRUST**

B- 207, Valmiki Apts, Near Pharmacy College, Sunder Nagar, Kalina, Santracruz- East, Mumbai - 400 098.

*PAGE DONATED BY : **SMT. MADHU HEGDE,** SANTACRUZ*

# ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ

✍ **ವಸುಧೇಂದ್ರ**

**ಆಧಾರ : ಐದು ಪೈಸೆ ವರದಕ್ಷಿಣೆ**

ಮಾರ್ಕಂಡೇಯ ಋಷಿಯ ಕತೆ ನಿಮಗೆಲ್ಲಾ ಗೊತ್ತು. ಮಹಾಶಿವಭಕ್ತನಾದ ಈ ಬಾಲಕ, ತನ್ನ ಹನ್ನೆರಡರ ವಯಸ್ಸಿನಲ್ಲಿ ಅಂತಕನು ಹಗ್ಗ ಹಿಡಿದು ಬಂದು ನಿಂತಾಗ, ಶಿವಲಿಂಗವನ್ನು ತಬ್ಬಿಕೊಂಡು ಲಯಕರ್ತನಿಗೆ ಮೊರೆಯಿಡುತ್ತಾನೆ. ಯಮನು ಹಾಕಿದ ಹಗ್ಗದ ಕುಣಿಕೆಗೆ ಶಿವಲಿಂಗವೂ ಸೇರಿ, ಶಿವನ ಸಿಟ್ಟು ಯಮನ ಮೇಲೆ ಹರಿಯುತ್ತದೆ. ಯಮಧರ್ಮರಾಯನು ಶಿವನ ಸಿಟ್ಟಿಗೆ ಸೋತು ಓಡಿ ಹೋಗುತ್ತಾನೆ. ಕೊನೆಗೆ ಶಾಂತನಾದ ಶಿವನು ಬಾಲಕನ ಭಕ್ತಿಗೆ ಬೆರಗಾಗಿ, ಚಿರಂಜೀವತ್ವದ ವರವನ್ನು ಕೊಟ್ಟು ಅದೃಶ್ಯನಾಗುತ್ತಾನೆ. ಇದೊಂದು ರೋಚಕ ಅಂತ್ಯವಿರುವ ಭಕ್ತಿ ಪಂಥದ ಕತೆ. ವಿಶೇಷವೆಂದರೆ ನನಗೆ ಈ ಕತೆಯ ಅಂತ್ಯಕ್ಕಿಂತಲೂ ಹೆಚ್ಚಾಗಿ, ಅದರ ಆರಂಭ ಇತ್ತೀಚಿನ ದಿನಗಳಲ್ಲಿ ಬಹಳ ಕಾಡುತ್ತಿದೆ. ಅದರ ಕುರಿತಾಗಿ ಒಂದಿಷ್ಟು ವಿವರಗಳನ್ನು ಈ ಪ್ರಬಂಧದಲ್ಲಿ ಚರ್ಚಿಸಿದ್ದೇನೆ.

ಮಾರ್ಕಂಡೇಯನ ತಂದೆಯ ಹೆಸರು ಮೃಕಂಡು. ತಾಯಿಯ ಹೆಸರು ಮರುದ್ವತಿ. ಬಹಳ ಕಾಲ ಇಬ್ಬರಿಗೂ ಮಕ್ಕಳಾಗದ್ದರಿಂದ, ಶಿವನನ್ನು ಬಹುವಾಗಿ ಪ್ರಾರ್ಥಿಸುತ್ತಾರೆ. ಇವರ ತಪಕ್ಕೆ ಒಲಿದ ಈಶ್ವರ ಮಗುವನ್ನು ದಯಪಾಲಿಸುವುದಕ್ಕೆ ಮುಂಚೆ 'ನಿಮಗೆ ನೂರು ವರ್ಷ ಬದುಕಿರುವ ದಡ್ಡ ಮಗ ಬೇಕೆ ಅಥವಾ ಹನ್ನೆರಡು ವರ್ಷ ಬದುಕಿರುವ ಜಾಣ ಮಗು ಬೇಕೆ?' ಎಂಬ ಶರತ್ತನ್ನು ಹಾಕುತ್ತಾನೆ. ಅದಕ್ಕೆ ಮೃಕಂಡು ಮುನಿ ಹೆಚ್ಚು ತಲೆಕೆಡಿಸಿಕೊಳ್ಳದೆ, ಅತ್ಯಂತ ಸಹಜತೆಯಿಂದ 'ಹನ್ನೆರಡು ವರ್ಷ ಮಾತ್ರ ಬದುಕಿರುವ ಜಾಣ ಮಗುವೇ ಆಗಲಿ' ಎಂದು ಹೇಳುತ್ತಾನೆ. ಜೀವಕ್ಕಿಂತಲೂ ಜ್ಞಾನವೇ ಶ್ರೇಷ್ಠವೆಂದು ನಿರ್ಧರಿಸಿದ ಮೃಕಂಡುವಿನ ಆಯ್ಕೆ ನನ್ನನ್ನು ಕಂಗೆಡಿಸುತ್ತದೆ. ಕೇವಲ ಗುಣ ಮತ್ತು ದೋಷಗಳ ಆಯ್ಕೆ ಬಂದಾಗ, ಮನುಷ್ಯ ಸಹಜವಾಗಿಯೇ 'ಗುಣ'ದತ್ತ ವಾಲುತ್ತಾನೆ. ಆದರೆ ಇವರೆಡೂ ಆಯ್ಕೆಯ ಜೊತೆಗೆ ಆಯುಷ್ಯವನ್ನೂ ಸೇರಿಸಿದ್ದರಿಂದ ಈ ಸಂದರ್ಭ ಸಂಕೀರ್ಣವಾಗಿದೆ.

ಮನುಷ್ಯನ ದಡ್ಡತನ ಅಷ್ಟು ಕೆಟ್ಟದ್ದೆ? ದಡ್ಡನಾದವನು ನೂರು ವರ್ಷ ಬದುಕಿರುವುದಕ್ಕಿಂತಲೂ ಜಾಣನಾದವನು ಹನ್ನೆರಡು ವರ್ಷ ಬದುಕುವುದು ಹೆಚ್ಚು ಮಹತ್ವ ಎನ್ನುವುದು ಎಷ್ಟು ಸರಿ? ನನಗಂತೂ ಇದೊಂದು ಅಮಾನುಷವಾದ ಆಯ್ಕೆಯಾಗಿ ಕಾಣಿಸುತ್ತದೆ. ಶಿವ 'ದಡ್ಡ ಮಗು' ಎಂದನೇ ಹೊರತು 'ಕ್ರೂರ ಮಗು' ಎಂದು ಹೇಳಲಿಲ್ಲ ಅಲ್ಲವೇ? ಹಿಂಸೆಯನ್ನು ಯಾವುದೇ ಬಗೆಯಲ್ಲಿ ಪ್ರೋತ್ಸಾಹಿಸುವ ಮನುಷ್ಯನನ್ನು ನಾನು ನಖಶಿಖಾಂತವಾಗಿ ವಿರೋಧಿಸುತ್ತೇನೆ. ಅಂತಹವರು ಆದಷ್ಟು ಕಡಿಮೆ ಈ ಜಗದಲ್ಲಿ ಹುಟ್ಟಲಿ ಎಂದು ಪ್ರಾರ್ಥಿಸೋಣ. ಆದರೆ ದಡ್ಡತನದಲ್ಲಿ ಯಾವ ಕೇಡಿದೆ? ಬದುಕಿನಲ್ಲಿ ಏನೇನೋ ಕಾರಣಕ್ಕಾಗಿ ನಾವು ಜಾಣರೋ ಅಥವಾ ದಡ್ಡರೋ ಆಗಿರುತ್ತೇವೆ. ಜಾಣರಾಗುವುದರಲ್ಲಿ ನಮ್ಮ ಶ್ರಮವೂ ಬಹುಮುಖ್ಯ ಆಗಿರುತ್ತದಾದರೂ ನಾವು ಬೆಳೆದ ಪರಿಸರ ಮತ್ತು ಒದಗಿದ ಅವಕಾಶಗಳು ಅದಕ್ಕೂ ಹೆಚ್ಚಾಗಿ ನಮ್ಮ ಬೌದ್ಧಿಕತೆಯನ್ನು ರೂಪಿಸುವುದರಲ್ಲಿ ಬಹು ಮಹತ್ವದ ಕಾರ್ಯ ನಿರ್ವಹಿಸುತ್ತದೆ. ಶಾಲೆಯಲ್ಲಿ ಸರಿಯಾಗಿ ಗಣಿತವನ್ನೋ ಅಥವಾ ಇಂಗ್ಲಿಷನ್ನೋ ಬೋಧಿಸುವ ಮಾಸ್ತರರೊಬ್ಬರು ನಮಗೆ ದಕ್ಕದೆ ದಡ್ಡರಾಗಿರುವ ಸಾಧ್ಯತೆಯಿದೆ. ನಮ್ಮ ಊರಿನಲ್ಲಿ ವಿಪರೀತ ನೀರಿನ ಸಮಸ್ಯೆಯಿದ್ದು ಇಡೀ ಬಾಲ್ಯವನ್ನೆಲ್ಲಾ ಮೈಲುಗಟ್ಟಲೆ ದೂರದಿಂದ ರಣಬಿಸಿಲಿನಲ್ಲಿ ನೀರನ್ನು ಹೊತ್ತು ತರುವುದರಲ್ಲಿಯೇ ಸವೆಸಿದ ಕಾರಣಕ್ಕಾಗಿ ನಾವು ಎಲ್ಲೋ ದೂರ ಉಳಿದುಬಿಟ್ಟಿರುತ್ತೇವೆ. ಮಲತಾಯಿಯೊಬ್ಬಳು ಮಗುವನ್ನು ವಿಪರೀತ ಕಾಡಿ, ಅದಕ್ಕೆ ಓದು ಬರಹಕ್ಕೆ ಅವಕಾಶ ಕೊಡದಂತೆ ಕೆಲಸವನ್ನು ಹೇರಿರುವುದರಿಂದ ಮಗುವಿನ ಬೌದ್ಧಿಕ ಬೆಳವಣಿಗೆ ಸರಿಯಾಗಿ ಆಗಿರದೇ ಇರಬಹುದು. ಸಜ್ಜನರ ಸಹವಾಸ ಸಿಗದೇ ಹೋದಾಗಲೂ ನಮ್ಮ ಬುದ್ಧಿಶಕ್ತಿ ಮಣ್ಣಿನಲ್ಲಡಗಿದ ವಜ್ರದಂತೆ ಮುಚ್ಚಿ ಹೋಗಿ ಬಿಟ್ಟಿರುತ್ತದೆ. ಹೀಗೆಲ್ಲಾ ಇರುವಾಗ, ಮನುಷ್ಯನೊಬ್ಬ ದಡ್ಡನೆಂದ ತಕ್ಷಣ ಅದಕ್ಕೆ ಪೂರ್ತಿಯಾಗಿ ಅವನನ್ನೇ ಜವಾಬ್ದಾರಿಯಾಗಿ ಮಾಡಿ, ಅವನನ್ನು ತಿರಸ್ಕರಿಸುವುದು ಯಾವ ನ್ಯಾಯ? ಈ ಜಗತ್ತಿನಲ್ಲಿ ಬಹುವಾಗಿ ಹಾನಿಯಾಗಿರುವುದು ಅತಿ ಜಾಣರಾದ ಕ್ರೂರಿಗಳಿಂದಲೇ ಹೊರತು ನಿಷ್ಪಾಪಿ ದಡ್ಡ ಜನರಿಂದಂತೂ ಖಂಡಿತಾ ಅಲ್ಲ. ನನಗೆ ದಡ್ಡ ಜನರ ಕುರಿತು ಯಾವ ಅಸಹನೆಯೂ ಇಲ್ಲ. ದಡ್ಡತನದ ಜೊತೆಯಲ್ಲಿ ಸಾಮಾನ್ಯವಾಗಿ ಮುಗ್ಧತೆಯೂ ಸೇರಿಕೊಂಡಿರುವುದನ್ನು ನಾನು ಕಂಡಿದ್ದೇನೆ. ಅದು ಬಹಳಷ್ಟು ಸಲ ನನಗೆ ಸುಂದರವಾಗಿಯೇ ಕಂಡಿದೆ.

'ಜ್ಞಾನಮಾರ್ಗವೇ ಸುಖದ ರಾಜಮಾರ್ಗ' ಎಂದು ನಮ್ಮ ಆಧ್ಯಾತ್ಮ ಹೇಳುತ್ತದೆ. ಎಲ್ಲ ಸುಖಗಳಿಗಿಂತಲೂ ಪರಮಸುಖ ಕೇವಲ ಜ್ಞಾನಾರ್ಜನೆ ಯಿಂದಲೇ ದೊರಕುತ್ತದೆ ಎಂಬುದು ಸತ್ಯವೇ ಆಗಿರಬಹುದು. ಆದರೆ ಕೇವಲ ಸುಖವೇ ಎಲ್ಲ ಸಮಸ್ಯೆಗಳಿಗೂ ಪರಿಹಾರವೇನೂ ಅಲ್ಲ. ವೈಯಕ್ತಿಕ ಸುಖಕ್ಕೂ, ಸಮಾಜದ ಒಳಿತಿಗೂ ಬಹಳ ಅಂತರವಿದೆ. ನಮ್ಮ ಜ್ಞಾನ ಹೆಚ್ಚಿದಂತೆಲ್ಲಾ ನಮ್ಮ ಸಹನಶೀಲತೆಯೂ ಹೆಚ್ಚಬೇಕು. ಕ್ಷಮಾಗುಣವೂ ಹೆಚ್ಚಬೇಕು. ಆದ್ದರಿಂದಲೇ ಜ್ಞಾನಿಗಳು ಹೆಚ್ಚಿರುವ ಸಮಾಜ ನೆಮ್ಮದಿಯಿಂದ ಕೂಡಿರಬೇಕು. ಆದರೆ ಗಳಿಸಿದ ಜ್ಞಾನವು ನಮ್ಮ ಅಹಂಕಾರವನ್ನು ಹೆಚ್ಚಿಸಿದರೆ ಒಳ್ಳೆಯದಕ್ಕಿಂತಲೂ ಹಾನಿಯೇ ಹೆಚ್ಚಾಗುತ್ತದೆ. ಅದು ಸಮಾಜದಲ್ಲಿ ಸುಳಿಗಳನ್ನು ಸೃಷ್ಟಿಸಿ ಆಹುತಿಗಳನ್ನು ಬೇಡುತ್ತದೆ.

ನಮ್ಮ ಕಣ್ಣೆದುರಿನಲ್ಲೇ ನಾವು ಬೆಳೆಸಿದ ಮಗುವನ್ನು ಕಳೆದುಕೊಂಡು ನೋವನ್ನು ಅನುಭವಿಸುವಾಗ, ಆ ಮಗು ಜಾಣನೋ ಅಥವಾ ದಡ್ಡನೋ ಎಂಬ ಸಂಗತಿ ನಮ್ಮ ನೋವಿನ ತೀಕ್ಷ್ಣತೆಯನ್ನು ಹೆಚ್ಚು ಅಥವಾ ಕಡಿಮೆ ಮಾಡುತ್ತದೆಯೇ? ಖಂಡಿತಾ ಇಲ್ಲ. ವಯಸ್ಸಿನಲ್ಲಿ ನಮಗಿಂತಲೂ ಚಿಕ್ಕವರಾದ, ನಾವೇ ಬೆಳೆಸಿದ ಸಸಿಯೊಂದು ನಮ್ಮ ಮುಂದೆಯೇ ಕಮರಿ ಹೋಗುವ ನೋವು ಪ್ರತಿಯೊಬ್ಬರಿಗೂ ನಿಸ್ಸಂಶಯವಾಗಿ ನೋವನ್ನು ತರುತ್ತದೆ. ನಾವು ಮಗುವನ್ನು ಬೆಳೆಸಿದ ಪರಿಯಲ್ಲಿ ಎಷ್ಟು ಪ್ರೀತಿಯನ್ನು ಕೊಟ್ಟು ಎಷ್ಟನ್ನು ಪಡೆದೆವೆನ್ನುವುದು ನಮ್ಮನೋವನ್ನು ನಿರ್ಧರಿಸುತ್ತದೆ. ಪ್ರೀತಿಯ ನೀರನ್ನು ಹನಿಸಿದಂತೆಲ್ಲಾ ವೃಕ್ಷವೊಂದು ಬೃಹತ್ತಾಗಿ ಬೆಳೆಯುತ್ತದೆ. ಅಂತಹ ಬೃಹತ್ ವೃಕ್ಷವೊಂದನ್ನು ಯಾವುದೋ ನೆಪಕ್ಕಾಗಿ ಕಡಿಯುವುದಕ್ಕೆ ಹೊರಟಾಗ, ಮರ ದೊಡ್ಡದಿದ್ದಷ್ಟೂ ದುಃಖ ಜಾಸ್ತಿಯಾಗುತ್ತದೆ.

ಹಾಗಿರುವಾಗ ಮೃಕಂಡು ಮುನಿ ಅಂತಹ ಬೇಡಿಕೆಯನ್ನೇಕೆ ಇತ್ತ? ಅಷ್ಟೆಲ್ಲಾ ಉಗ್ರ ತಪಸ್ಸನ್ನು ಮಾಡಿ, ಅದಕ್ಕೆ ಪ್ರತಿಫಲವಾಗಿ ಕೇವಲ ಹನ್ನೆರಡು ವರ್ಷ ಬಾಳುವ ಮಗುವಿಗಾಗಿ ಏಕೆ ಹಾತೊರೆದ? ಅದಕ್ಕೂ ಕಾರಣವನ್ನು ಬಹುಮಟ್ಟಿಗೆ ಊಹಿಸಬಹುದಾಗಿದೆ. ಮೃಕಂಡು ಮುನಿ ಒಬ್ಬ ವಿದ್ವಾಂಸ. ಆ ಕಾಲಘಟ್ಟದ ಮಹಾಜಾಣರಲ್ಲಿ ಒಬ್ಬನಾಗಿರಬೇಕು. ಮನುಷ್ಯನೊಬ್ಬ ಜ್ಞಾನವನ್ನು ಗಳಿಸಿದಂತೆಲ್ಲಾ, ಜಾಣತನವನ್ನು ಬಹುವಾಗಿ ಗೌರವಿಸುವ,

*PAGE DONATED BY : **SHRI V. G. BHAT, NIGDI***

ಅದನ್ನು ಶ್ರೇಷ್ಠವೆಂದು ಕಾಣುವ ಮನೋಭಾವ ಅವನಲ್ಲಿ ಬೆಳೆಯುತ್ತದೆ. ಅದಕ್ಕೆ ಪೂರಕವಾಗಿ ದಡ್ಡತನವನ್ನು ಹೀನಾಯವಾಗಿ ಕಾಣುವ ಸ್ವಭಾವವೂ ಅವನಲ್ಲಿ ಸೇರಿಕೊಳ್ಳುತ್ತದೆ. ಇದೊಂದು ರೀತಿಯಲ್ಲಿ ಶ್ರೇಷ್ಠತೆಯ ವ್ಯಸನವೂ ಹೌದು. ಮತ್ತೊಂದು ರೀತಿಯಲ್ಲಿ ಜ್ಞಾನದ ಅಹಂಕಾರವೂ ಹೌದು. ಅಂತಹ ಬೌದ್ಧಿಕ ವ್ಯಸನ ಮೃಕಂಡುವಿನಲ್ಲಿರಬೇಕು ಅನಿಸುತ್ತದೆ. ಆದ್ದರಿಂದಲೇ ಸಮಾಜದಲ್ಲಿ ದಡ್ಡ ಮಗುವಿನ ತಂದೆಯಾಗಿ ಗುರುತಿಸಿಕೊಳ್ಳುವ ಅವಮಾನವನ್ನು ಅವನು ಸಹಿಸಲಾರದವನಾಗಿದ್ದ. ಮಗನೊಬ್ಬ ದಡ್ಡನಾದರೆ ಶಾಲೆಯ ಮಾಸ್ತರರು ವಿಪರೀತವಾಗಿ ಸಂಕಟವನ್ನು ಮತ್ತು ಅವಮಾನವನ್ನೂ ಅನುಭವಿಸುತ್ತಾರಲ್ಲಾ, ಅಂತಹದೇ ಭಯ ಅವನನ್ನು ಕಾಡಿರಬೇಕು. ಆ ಭವಿಷ್ಯವನ್ನು ಊಹಿಸಿಕೊಂಡೇ ಅವನು ತನ್ನ ಆಯ್ಕೆಯನ್ನು ತತ್‌ಕ್ಷಣವೇ ನಿರ್ಧರಿಸಿಬಿಟ್ಟ. ಒಂದು ಡಜನ್ ಬಾಳೆಹಣ್ಣು ಕೊಳ್ಳುವಂತೆ, ಮಗನಿಗೆ ಒಂದು ಡಜನ್ ವರ್ಷಗಳ ಆಯುಷ್ಯವನ್ನು ತನ್ನ ತಪಸ್ಸಿಗೆ ಪ್ರತಿಫಲವಾಗಿ ಕೊಂಡುಕೊಂಡ.

ಈ ಸಂದರ್ಭದ ಮತ್ತೊಂದು ವಿಶೇಷವೇನು ಗೊತ್ತೆ? ಆಯ್ಕೆಯನ್ನು ಮಾಡಿದವನು ಮೃಕಂಡು ಮುನಿಯೇ ಹೊರತು ಅವನ ಪತ್ನಿ ಮರುದ್ವತಿಯಲ್ಲ. ಅವಳ ಅಭಿಪ್ರಾಯವೇನೆಂದು ಆತ ಕೇಳಿರಬಹುದು ಎಂದು ಕತೆಯಲ್ಲಂತೂ ತೋರುವುದಿಲ್ಲ. ತಾಯಿಯಾದವಳು ಬಹುಶಃ ಇಂತಹ ದುಷ್ಟ ಆಯ್ಕೆ ಮಾಡುತ್ತಿರಲಿಲ್ಲವೆನ್ನುವುದು ನನ್ನ ಊಹೆ. ಆಕೆಗೆ ಮಗುವೊಂದು ಜೀವಂತವಾಗಿರುವುದು ಪ್ರಥಮ ಆದ್ಯತೆಯಾಗುತ್ತದೆ. ಅನಂತರ ಅದರ ಜಾಣತನ ಅಥವಾ ದಡ್ಡತನಗಳ ಸಮಸ್ಯೆಯನ್ನು ಎತ್ತಿಕೊಳ್ಳುತ್ತಾಳೆ. ತನ್ನ ಕಣ್ಣೆದುರಿನಲ್ಲೇ ಮಗುವಿನ ಸಾವನ್ನು ಯಾವ ತಾಯಿಯೂ ಬೇಡಿಕೊಳ್ಳಲಾರಳು. ವೈಧವ್ಯಕ್ಕಿಂತಲೂ ಪುತ್ರಶೋಕ (ಅಥವಾ ಪುತ್ರಿ ಶೋಕ) ದೊಡ್ಡದು. ಕಾಡುವ ಗಂಡ ಸತ್ತರೆ ಹೆಣ್ಣೊಬ್ಬಳು ನೆಮ್ಮದಿಯ ನಿಟ್ಟುಸಿರು ಬಿಡಬಹುದು. ಆದರೆ ಎಷ್ಟೇ ಕಾಡುವ ಮಗನು ಸತ್ತರೂ, ಒಂದೆರಡು ಹನಿ ಕಣ್ಣೀರು ಹಾಕುತ್ತಾಳೆ. ಹೊತ್ತು ಹೆತ್ತ ಸಾಹಸ ಸಣ್ಣದಲ್ಲ. ಮಗುವಿನ ದಡ್ಡತನಕ್ಕೆ ಆಕೆ ಕೊರಗಬಹುದು. ಭಗವಂತನನ್ನು ಶಪಿಸಬಹುದು. ಮಗುವನ್ನೂ ಬೈಯಬಹುದು. ಆದರೆ ಅದಕ್ಕೆ ಪ್ರತಿಯಾಗಿ ಮಗುವಿನ ಜೀವವನ್ನು ಆಕೆಯೆಂದೂ ಬೇಡಲಾರಳು.

ಇದನ್ನು ಮತ್ತೊಂದು ಆಯಾಮದಿಂದಲೂ ನೋಡಬಹುದೆನ್ನಿಸುತ್ತದೆ. ಮಗುವಿನ ವಯಸ್ಸನ್ನು ನಿರ್ಧರಿಸುವ ಹಕ್ಕು ತಂದೆ-ತಾಯಿಗಿದೆಯೇ? ಹಡೆದ ಮಾತ್ರಕ್ಕೆ ಹಣೆಬರಹವನ್ನು ಬರೆಯಲಾದೀತೆ? ಯಾವುದೋ ಗಂಡು, ಯಾವುದೋ ಹೆಣ್ಣಿನೊಡನೆ ನಡೆಸುವ ಸಮಾಗಮದಿಂದಾಗಿಯೇ ಮಗುವೊಂದು ಜನಿಸುವುದರಿಂದ, ಅದಕ್ಕೆ ವಂಶವಾಹಿನಿಯು ಅವರಿಂದಲೇ ದಕ್ಕುತ್ತದೆನ್ನುವುದು ಸತ್ಯ. ಏನೇ ಆದರೂ ಮಗುವಿಗೆ ತಂದೆ-ತಾಯಿಯರನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕಿಲ್ಲ. ಆದ್ದರಿಂದ ಸ್ವಲ್ಪಮಟ್ಟಿಗೆ ವಂಶವಾಹಿನಿಗಳು ಮಗುವಿನ ಆಯಸ್ಸಿನ ಭಾಗಶಃ ಮಿತಿಯನ್ನು ಪೂರ್ವ ನಿರ್ಧರಿಸುತ್ತವೆ. ಆದರೆ ಪ್ರತಿಯೊಂದು ಜೀವಕ್ಕೂ ಆ ಪೂರ್ವ ನಿರ್ಧಾರಿತ ಗಡಿಯನ್ನು ದಾಟುವ ಅಥವಾ ದಾಟದೇ ಉಳಿಯುವ ಶಕ್ತಿಯನ್ನು ತನ್ನ ಬದುಕುವ ಕ್ರಮದಿಂದ ಬದಲಾಯಿಸಿಕೊಳ್ಳುವ ಅವಕಾಶವಿರುತ್ತದೆ. ತನ್ನ ನಿತ್ಯ ಜೀವನದಲ್ಲಿ ಮಾಡುವ ವ್ಯಾಯಾಮ, ಸೇವಿಸುವ ಆಹಾರ, ಕುಡಿಯುವ ನೀರು, ಉಸಿರಾಡುವ ಗಾಳಿ, ಮನಸ್ಸನ್ನು ಆರೋಗ್ಯವಾಗಿ ಕಾದಿಟ್ಟುಕೊಳ್ಳುವ ರೀತಿ ಎಲ್ಲವೂ ಅವನ ಅಂತಿಮ ಗಳಿಗೆಯನ್ನು ಮುಂದೂಡುತ್ತಲೇ ಹೋಗುತ್ತವೆ. ಒಂದೇ ತಂದೆ-ತಾಯಿಯ ಮಕ್ಕಳಾದರೂ ಅವರ ಆಯುಷ್ಯಗಳು ಬಹು ವಿಭಿನ್ನವಾಗಿರುವುದನ್ನು ನಾವು ಕಂಡಿದ್ದೇವೆ. ಹಾಗಿದ್ದ ಮೇಲೆ ಮೃಕಂಡು ಮತ್ತು ಮರುದ್ವತಿ ದಂಪತಿ ಅದು ಹೇಗೆ ಮಗುವಿನ ಆಯುಷ್ಯವನ್ನು ಕರಾರುವಕ್ಕಾಗಿ ಹನ್ನೆರಡು ಎಂದು ನಿರ್ಧರಿಸುವ ಅನೈಸರ್ಗಿಕ ಕಾರ್ಯಕ್ಕೆ ಮುಂದಾದರು? ಅದನ್ನು ವಿರೋಧಿಸಲೆಂದೇ ಇರಬೇಕು, ಮಾರ್ಕಂಡೇಯ ತನ್ನ ಹನ್ನೆರಡು ವರ್ಷಗಳ ಆಯುಷ್ಯವನ್ನು ತನ್ನ ಭಕ್ತಿಯ ಶಕ್ತಿಯಿಂದ ಅಸೀಮಗೊಳಿಸಿಕೊಂಡು ಅಪ್ಪ-ಅಮ್ಮನಿಗೆ ತಮ್ಮ ತಪ್ಪನ್ನು ನಿರೂಪಿಸಿಬಿಟ್ಟ.

ತಂದೆ-ತಾಯಿಗಳೇ ಮಗುವಿನ ವಯಸ್ಸನ್ನು ನಿರ್ಧರಿಸುವುದು ಅನೈಸರ್ಗಿಕವೆಂದಾದ ಮೇಲೆ, ಅದನ್ನು ಸರಕಾರ ಅಥವಾ ನ್ಯಾಯಾಂಗ ನಿರ್ಧರಿಸಬಹುದೆ? ಈ ಕಾರಣಕ್ಕಾಗಿಯೇ ನನಗೆ ಉರಿಶಿಕ್ಷೆಯಲ್ಲಿ ನಂಬಿಕೆಯೇ ಬರುವುದಿಲ್ಲ. ವ್ಯಕ್ತಿಯೊಬ್ಬನ ಕ್ರೌರ್ಯವನ್ನು ಹತೋಟಿಯಲ್ಲಿಡಲು ನಾವು ಅವನಿಗೆ ಏನು ಬೇಕಾದರೂ ಶಿಕ್ಷೆಯನ್ನು ಕೊಡಬಹುದು. ಆದರೆ ಪೂರ್ತಿ ಜೀವವನ್ನೇ ತೆಗೆದುಬಿಡುವ ಸಂಗತಿ ನನಗೆ ಜೀರ್ಣಿಸಿಕೊಳ್ಳಲು ಕಷ್ಟವಾಗುತ್ತದೆ. ಆದರೆ ಈ ಅಭಿಪ್ರಾಯವನ್ನು ವಿರೋಧಿಸುವವರ ತರ್ಕವನ್ನು ಸುಲಭವಾಗಿ ಅಲ್ಲಗಳೆಯುವಂತಿಲ್ಲ. ಯಾವಾಗ ಜೀವತೆಗೆಯುವ ಅಧಿಕಾರವನ್ನು ಸರಕಾರ ಅಥವಾ ನ್ಯಾಯಾಂಗ ಕಳೆದುಕೊಳ್ಳುತ್ತದೆಯೋ ಆಗ ಸಮಾಜದಲ್ಲಿ ಕ್ರೌರ್ಯ ಹೆಚ್ಚಾಗುತ್ತದೆ ಎನ್ನುತ್ತಾರೆ. ಅಂದರೆ ಜೀವಕ್ಕೆ ಅಪಾಯವಿಲ್ಲ ಎನ್ನುವ ಸತ್ಯ ಗೊತ್ತಾಗುತ್ತಲೇ ವ್ಯಕ್ತಿಯೊಬ್ಬ ಎಂತಹ ದುಷ್ಟತನಕ್ಕೂ ಅಂಜದೆ ಮುಂದಡಿಯಿಡುತ್ತಾನೆ ಎನ್ನುವುದು ಈ ತರ್ಕದ ಹಿಂದಿನ ಆಲೋಚನೆಯಾಗಿದೆ. ಆದರೆ ನನಗೆ ಈ ಮಾತಿನಲ್ಲಿ ಸ್ವಲ್ಪ ಅಪನಂಬಿಕೆಯಿದೆ. ಮನುಷ್ಯನಿಗೆ ಹೆದರಿಕೆಯಾಗುವುದು ಕೇವಲ ಜೀವ ತೆಗೆಯುವ ಶಿಕ್ಷೆಯೊಂದರಿಂದ ಮಾತ್ರವೇ? ಚಿಕ್ಕಂದಿನಲ್ಲಿ ನಮ್ಮ ಗಣಿತದ ಮಾಸ್ತರರು ಬೆತ್ತದಿಂದ ಅಂಗೈಯ ಗಣ್ಣುಗಳಿಗೆ ಹೊಡೆಯುತ್ತಾರೆಂಬ ಹೆದರಿಕೆಯಿಂದಲೇ ನಾವು ಅವರು ಕೊಟ್ಟ ಹೋಂವರ್ಕ್ ಯಾವತ್ತೂ ತಪ್ಪಿಸುತ್ತಿರಲಿಲ್ಲವಲ್ಲವೇ? ಅಂತಹ ಚಿಕ್ಕ ಶಿಕ್ಷೆಯೇ ಆ ಮಟ್ಟಿನ ಭಯವನ್ನು ಹುಟ್ಟಿಸುತ್ತದೆಂದರೆ, ಜೈಲಿನಲ್ಲಿ ಕೊಡುವ ಇತರ ಶಿಕ್ಷೆಗಳಿಗೆ ಆ ಶಕ್ತಿಯಿಲ್ಲವೆ?

ಜಾಣತನವನ್ನು ಮತ್ತು ದಡ್ಡತನವನ್ನು ದ್ವೇಷಿಸುವ ಅಥವಾ ವೈಭವೀಕರಿಸುವ ಸಮಾಜಗಳೆರಡೂ ಅನಾರೋಗ್ಯಕರವಾಗಿರುತ್ತವೆ, ಕ್ರೌರ್ಯದಿಂದ ಕೂಡಿರುತ್ತವೆ. ಇದಕ್ಕೆ ಇತಿಹಾಸದಲ್ಲಿಯೇ ಬಹುತೇಕ ಉದಾಹರಣೆಗಳು ನಮಗೆ ದಕ್ಕುತ್ತವೆ. ಜರ್ಮನ್‌ನ ಸರ್ವಾಧಿಕಾರಿ ಹಿಟ್ಲರನ ಕಾಲವನ್ನೇ ತೆಗೆದುಕೊಳ್ಳೋಣ. ಯಹೂದಿಗಳು ಬಹುತೇಕ ಜಾಣ ಜನರಾಗಿದ್ದರು. ಅವರಿಗದು ತಮ್ಮ ವಂಶವಾಹಿನಿಗಳಿಂದ ದಕ್ಕಿತ್ತೋ ಅಥವಾ ಬದುಕಿನ ಸಂಸ್ಕಾರದಿಂದ ದಕ್ಕಿತ್ತೋ ಹೇಳುವುದು ಕಷ್ಟ. ಬಹುಶಃ ಎರಡರ ಕೊಡುಗೆಯೂ ಇರಬಹುದು. ವಾಣಿಜ್ಯದಲ್ಲಿ ಬಹಳ ಯಶಸ್ಸನ್ನು ಕಂಡಿದ್ದ ಇವರು ಹಣವಂತರಾಗಿದ್ದರು. ಸ್ಥಿತಿವಂತ ಬದುಕನ್ನು ನಡೆಸುತ್ತಿದ್ದರು. ಸರಕಾರದ ಬಹು ಉತ್ತಮ ಸ್ಥಾನಗಳನ್ನು ಇವರು ಹೊಂದಿದ್ದರು. ಆದರೆ ಸಮಾಜದಲ್ಲಿ ಇವರು ಅಲ್ಪಸಂಖ್ಯಾತರಾಗಿದ್ದರು. ಆ ಕಾರಣದಿಂದಾಗಿಯೇ ಬಹುಸಂಖ್ಯಾತರಾಗಿದ್ದ ಜನಸಾಮಾನ್ಯ ನಾಜಿಗಳು ಇವರ ಯಶಸ್ಸನ್ನು ದ್ವೇಷಿಸಿದ್ದು ಸಹಜವಾಗಿತ್ತು. ಆದರೆ ಸರ್ವಾಧಿಕಾರಿವನ್ನು ಪಡೆದುಕೊಂಡ ಹಿಟ್ಲರ್ ಕೂಡ ಅದೇ ಹಾದಿಯನ್ನು ಹಿಡಿದದ್ದು ಎಂತಹ ವಿನಾಶಕ್ಕೆ ದಾರಿಮಾಡಿಕೊಟ್ಟಿತು ಎನ್ನುವುದನ್ನು ನಾವು ಕಂಡಿದ್ದೇವೆ. ಜಾಣತನವನ್ನು ದ್ವೇಷಿಸಬಹುದೇ ಹೊರತು ಅದನ್ನು ಕಿತ್ತುಕೊಳ್ಳುವುದು ಸಾಧ್ಯವಿಲ್ಲವೆನ್ನುವುದಕ್ಕೆ ಹಿಟ್ಲರ್ ಸಾರ್ವಕಾಲಿಕ ಉದಾಹರಣೆಯಾಗಿ ಜಗತ್ತಿನಲ್ಲಿ ನಿಂತುಬಿಟ್ಟ.

ಅದೇ ರೀತಿ ಭಾರತದಲ್ಲಿ ವರ್ಣಾಶ್ರಮ ಆಧಾರಿತ ವರ್ಗೀಕರಣ ದಿಂದಾಗಿ, ಉನ್ನತ ವರ್ಣದವರು ದಲಿತರ ದಡ್ಡತನವನ್ನು ಹೀನಾಯವಾಗಿ ಕಂಡ ಕಾರಣದಿಂದಾಗಿಯೇ ನಡೆದ ಅನಾಹುತಗಳು ಇಂದಿಗೂ ಮುಗಿದಂತೆ

*PAGE DONATED BY : **SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT (DEC. 2012)***

ಕಾಣುವುದಿಲ್ಲ. ಉನ್ನತ ವರ್ಣದವರೆಲ್ಲರೂ ತಾವು ಜಾಣರೆಂದು ಭಾವಿಸಿ, ಕೆಳಗಿನವರನ್ನು ಕೀಳಾಗಿ ಕಂಡಿದ್ದು ಯಾವ ಬಗೆಯ ಸಂಕಟಗಳನ್ನು ತಂದಿಟ್ಟು ಸಮಾಜವನ್ನು ಸುಕ್ಕುಗಟ್ಟಿಸಿವೆಯೆಂದರೆ ಈವತ್ತಿಗೂ ಆ ಸುಕ್ಕನ್ನು ಬಿಡಿಸಲಾಗದೆ ಒದ್ದಾಡುತ್ತಿದ್ದೇವೆ. ದ್ವೇಷಿಸುವ ಗುಣವನ್ನು ಬೆಳೆಸಿಕೊಂಡವರ ಕೈಗೆ ಅಧಿಕಾರ ದಕ್ಕಿದರಂತೂ ತೀರಿತು. ಕಪಿಗೆ ಕಳ್ಳು ಕುಡಿಸಿದಂತೆಯೇ ಸರಿ. ಪ್ರೀತಿ ಮರೆಯಾದ ಸಮಾಜದಲ್ಲಿ ಬದುಕುವುದು ಬಹುಘೋರ ಸಂಗತಿಯಾಗಿರುತ್ತದೆ.

ಜೀವಕ್ಕೆ ಪ್ರಥಮ ಆದ್ಯತೆ ನೀಡಿ, ಜಾಣತನಕ್ಕೆ ಎರಡನೆಯ ಸ್ಥಾನವನ್ನು ಕೊಟ್ಟಾಗಲೇ ಸಮಾಜ ಸಹನೀಯವಾಗುತ್ತದೆ. ಅದರಲ್ಲೂ ಬಹುಸಂಖ್ಯಾತರಾಗಿರುವ ಜನರು ಪ್ರೀತಿಸುವ ಗುಣವನ್ನು ಬೆಳೆಸಿಕೊಳ್ಳುವುದು ಮತ್ತು ಕ್ಷಮಿಸುವ ಮನೋಧರ್ಮವನ್ನು ರೂಢಿಸಿಕೊಳ್ಳುವುದು ಅತ್ಯಂತ ಮುಖ್ಯವಾಗಿರುತ್ತದೆ. ಸಾಮಾನ್ಯವಾಗಿ ಯಾವುದೇ ಸಮಾಜವೇ ಆಗಿರಲಿ, ಆಳುವ ಅಧಿಕಾರಿಗಳು ಭಾಗಶಃ ಬಹುಸಂಖ್ಯಾತ ಸಮುದಾಯದವರೇ ಆಗಿರುತ್ತಾರೆ. ಅವರಲ್ಲಿ ಪ್ರೀತಿ ಕುಗ್ಗಿ, ದ್ವೇಷದ ದಳ್ಳುರಿ ಹೆಚ್ಚಾದರೆ ತೀರಿತು. ಇಡೀ ಸಮುದಾಯ ಉರಿಯಲ್ಲಿ ಸುಟ್ಟು ಕರಕಲಾಗುತ್ತದೆ. ನಮ್ಮ ಭಾರತದಲ್ಲಿಯೇ ಬಹಳಷ್ಟು ರಾಜರು, ರಾಜಕೀಯ ವ್ಯಕ್ತಿಗಳು ಇದನ್ನು ನಮ್ಮ ಕಣ್ಣ ಮುಂದೆಯೇ ತೋರಿಸಿ ಹೋಗಿದ್ದಾರೆ.

ಜಾಣತನವೆನ್ನುವುದು ಪ್ರಶಂಸೆಯನ್ನು ಬಯಸುತ್ತದೆ. ಪ್ರೋತ್ಸಾಹವನ್ನು ಬೇಡುತ್ತದೆ. ಅಂತಹ ಸದ್ಗುಣಗಳಿಲ್ಲದೆ ಯಾವುದೇ ಸಮಾಜವೂ ಪ್ರಗತಿಪರವಾಗಲಾರದು. ಯಾವುದೇ ದೇಶವೂ ಉದ್ಧಾರವಾಗಲಾರದು. ಬೌದ್ಧಿಕತೆಯನ್ನು ನಿರ್ಲಕ್ಷ್ಯ ಮಾಡಿ ಹತ್ತಿಕ್ಕಿದರೆ ಅದು ಆ ಸಮಾಜದಲ್ಲಿ ನಶಿಸಿ ಹೋಗುತ್ತದೆ ಅಥವಾ ಬೇರೊಂದು ಉತ್ತಮ ಸಮಾಜವನ್ನು ಹುಡುಕಿಕೊಂಡು ವಲಸೆ ಹೋಗುತ್ತದೆ. ಆದರೆ ಪ್ರಶಂಸೆ, ಪ್ರೋತ್ಸಾಹಗಳ ಸ್ಥಾನದಲ್ಲಿ ವೈಭವೀಕರಣ ಸ್ಥಾಪಿತಗೊಂಡು, ದಡ್ಡತನವನ್ನು ಹೀನಾಯವಾಗಿ ಕಾಣುವ ಹಂತಕ್ಕೆ ಹೋದರೆ ಎಲ್ಲವೂ ಕೆಡುತ್ತದೆ. ಎಲ್ಲಾ ಸಮಾಜದಲ್ಲೂ ಯಾವುದೋ ವಿಂಗಡನೆಯಿಂದಾಗಿ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ಸೃಷ್ಟಿಯಾಗುತ್ತಾರಲ್ಲವೆ? ಅಂತಹ ಸಮಾಜದಲ್ಲಿ ಬಹುಸಂಖ್ಯಾತರು ಜಾಣರು, ಸಹನಶೀಲರು, ಸೂಕ್ಷ್ಮತೆಯುಳ್ಳವರೂ ಆಗಿದ್ದರೆ ಸಾಕು, ರಾಮರಾಜ್ಯವೆನ್ನುವುದು ಬೇರೇನೂ ಅಲ್ಲ.

ನಮ್ಮ ಅಪಾರ್ಟ್‌ಮೆಂಟ್ ಮಧ್ಯದಲ್ಲಿ ಸಾಕಷ್ಟು ಬಯಲಿದೆ. ಈ ಬಯಲಿನಲ್ಲಿ ಪ್ರತಿನಿತ್ಯ ಬೆಳಿಗ್ಗೆ ಐದು ಗಂಟೆಯಿಂದಲೇ ಜನರು ವಾಕಿಂಗ್ ಮಾಡಲು ಶುರು ಮಾಡುತ್ತಾರೆ. ಅಪಾರ್ಟ್‌ಮೆಂಟ್‌ನಲ್ಲಿ ಬಹುತೇಕ ಸಾಫ್ಟ್ ವೇರ್ ಕಂಪನಿಗಳಲ್ಲಿ ಕೆಲಸ ಮಾಡುವ ಆಧುನಿಕ ಜನರಿದ್ದರೂ, ಅವರ ತಂದೆ-ತಾಯಿಗಳೆಲ್ಲರೂ ನಮ್ಮ ಹಿಂದಿನ ತಲೆಮಾರಿನವರೇ ಆಗಿದ್ದಾರೆ. ಹೆಚ್ಚಾಗಿ ಈ ಹಿರಿಯ ಜೀವಗಳೇ ಬೆಳಿಗ್ಗೆ ವಾಕಿಂಗ್‌ಗೆ ಬರುತ್ತಾರೆ. ಅವರು ಅರ್ಧ ವಾಕಿಂಗ್ ಮುಗಿಸುವ ಹೊತ್ತಿಗೆ ಮೂಡಣದಲ್ಲಿ ಸೂರ್ಯದೇವ ಮೇಲೇಳುತ್ತಾ ಬರುತ್ತಾನೆ. ಹೊನ್ನಿನ ಬಣ್ಣದಲ್ಲಿ ಮಿರಮಿರನೆ ಮಿಂಚುವ ಈತನು ಕಣ್ಣಿಗೆ ಗೋಚರಿಸಿದ ತಕ್ಷಣ ಈ ಹಿರಿಯ ಜೀವಗಳು ವಾಕಿಂಗ್ ಮಾಡುವುದನ್ನು ಕ್ಷಣಕಾಲ ನಿಲ್ಲಿಸಿ, ಭಕ್ತಿಯಿಂದ ಸೂರ್ಯದೇವನಿಗೆ ಕೈಮುಗಿದು 'ಬದುಕಿನಲ್ಲಿ ಮತ್ತೊಂದು ದಿನದ ಆಯುಷ್ಯವನ್ನು ಕೊಟ್ಟೆಯೋ ಪರಮಾತ್ಮ. ಇದೋ ನಿನಗೆ ನನ್ನ ವಂದನೆ' ಎಂದು ಮನಸ್ಸಲ್ಲಿ ಧ್ಯಾನಿಸಿ, ಪರವಶರಾಗಿ ಮತ್ತೆ ತಮ್ಮ ವಾಕಿಂಗ್‌ನ್ನು ಮುಂದುವರಿಸುತ್ತಾರೆ. ಅವರು ದಡ್ಡರೋ, ಜಾಣರೋ, ಯಶಸ್ವಿಗಳೋ, ಸೋತವರೋ, ನೊಂದವರೋ, ನಲಿದವರೋ, ಬಡವರೋ, ಶ್ರೀಮಂತರೋ, ಉನ್ನತ ಕುಲದವರೋ, ಕೀಳು ಕುಲದವರೋ, ಕನ್ನಡದವರೋ, ಹೊರನಾಡಿನವರೋ- ಯಾವುದೂ ಗೊತ್ತಿಲ್ಲದಿದ್ದರೂ, ಒಂದು ದಿನ ಆಯುಷ್ಯವನ್ನು ಹೆಚ್ಚಿಸಿದ್ದಕ್ಕಾಗಿ ಭಗವಂತನಿಗೆ ಧನ್ಯವಾದಗಳನ್ನು ಅರ್ಪಿಸುವ ರೀತಿ ನನಗೆ ಜಗತ್ತಿನ ಅತ್ಯಂತ ಸುಂದರ ದೃಶ್ಯಗಳಲ್ಲಿ ಒಂದೆಂದು ತೋರುತ್ತದೆ. ಈ ಹಿರಿಯರ ಮುಂದೆ ಶಿವನು ಪ್ರತ್ಯಕ್ಷನಾಗಿ 'ಹನ್ನೆರಡು ವರ್ಷದ ಜಾಣ ಮಗನೋ, ನೂರು ವರ್ಷದ ದಡ್ಡ ಮಗನೋ' ಎಂಬ ಆಯ್ಕೆಯನ್ನು ಒಡ್ಡಿದ್ದರೆ, ಖಂಡಿತವಾಗಿಯೂ ಮೃಕಂಡು ಮುನಿ ಮಾಡಿದ ತಪ್ಪನ್ನು ಇವರು ಮಾಡಲಿಕ್ಕಿಲ್ಲ ಎಂದು ನನಗನಿಸುತ್ತದೆ.

---

# ಮಡಿವಂತಿಕೆ

**- ಡಾ. ಜೆ. ಡಿ. ಜೋಶಿ**

ಮಡಿವಂತಿಕೆಯಿರಬೇಕು ಎಲ್ಲೆಡೆ
ಜೀವನದುದ್ದಕೂ ಹರಡುತಲೇ
ಮನೆ ಮಡಿಯಿಡಲು ಪೊರಕೆ ನೆರವು
ಮೈಮಡಿಗಿರಲಿ ನೀರು ಸೋಪು
ತಲೆ ಶುದ್ಧವಾಗಿಡಲು ಕೊಬ್ಬರಿಯೆಣ್ಣೆ
ಕಿವಿ ಮಡಿಯಿಡಲು ಮೆಣೆ ಸಾಕು
ಕಣ್ಣ ಶುದ್ಧಿಗೆ ಹಾಲಿನ ಹನಿಯು
ಮೂಗಿನ ಶುದ್ಧಿಗೆ ಕಿರುಬೆರಳು
ಹಲ್ಲಿನ ಮಡಿಗೆ ಬ್ರಶ್ ಜೊತೆಗೆ
ಪುಡಿ ಬೇವಿನಕಡ್ಡಿಗಳ ಸಹಾಯ
ನಾಲಗೆ ಶುದ್ಧಿಗೆ ಕೈಬೆರಳು ಸಾಕಲ್ಲ
ಉಗುರು ಶುದ್ಧಿಗೆ ಕತ್ತರಿ ಬೇಕಾದೀತು
ದೇಹಶುದ್ಧಿಗೆ ಅಭ್ಯಂಗ ಸ್ನಾನ ಅನಿವಾರ್ಯ
ವಸ್ತ್ರಧಾರಣೆ ಇರಲಿ ಬಾಹ್ಯ ಶುದ್ಧಿಗೆ
ಮನೆ ಶುದ್ಧತೆಗೆ ಸಹಕಾರ
ಸಂಪೂರ್ಣ ಕಟ್ಟಡಕೆ ನಿವಾಸಿ ಒಲುಮೆ
ಚಾಳುಗಳು, ಕೇರಿಗಳು, ಗಲ್ಲಿ, ಬೀದಿಗಳು
ಊರ ತಾಲೂಕು ಜಿಲ್ಲೆಗಳಲು ಇರಿಸೆ
ಮಡಿವಂತಿಕೆಯ ಸಮಾಜ ಸರಕಾರಗಳ
ನಿಯತ ಕಾರ್ಯಾಚರಣೆ ಬೇಕೇ ಬೇಕು
ಬೆಳೆದಂತೆ ರಾಜ್ಯದ, ದೇಶದ, ವಿದೇಶ
ಪರ್ವತಾವಳಿಗಳ, ನದಿಗಳ ಸಂಚಲನದ
ಕಾಡು, ಸಮುದ್ರ ತಟ ಸಮುದ್ರಗಳ
ಮಡಿವಂತಿಕೆಗೆ ಜಗದ ಜನರ ಬಾಂಧವ್ಯ
ಗಾಳಿ, ಮೋಡ, ಮಳೆ, ಪರಿಸರ, ಆಕಾಶ
ಬಾಹ್ಯಾಕಾಶ, ಗ್ರಹಮಂಡಲ, ನಕ್ಷತ್ರ ಮಂಡಲ
ಅಪಾರ ಬ್ರಹ್ಮಾಂಡ ಮಡಿವಂತಿಕೆಗೆ
ಬುದ್ಧಿ ರವಿ ಕಾಣದ್ದು ಕವಿ ಕಾಣುವ
ಭಾಷಾ ಶುದ್ಧಿ, ಸಾಹಿತ್ಯ ಶುದ್ಧಿ, ಕಲಾಭಿನಯ
ಶುದ್ಧಿ, ಆಟದಲಿ ಶುದ್ಧಿ, ನೋಟದಲಿ ಶುದ್ಧಿ
ಇವು ಕೂಡ ಸೇರಬೇಕು ಬಹಿರಂಗ ಶುದ್ಧಿಗೆ
ಶುದ್ಧವಿದ್ದರೆ ಸಾಕು ಹಾರಾಟ ಬೇಡ ★

*Page Donated by : **Shri Suhas Gunishastri,** Prabhadevi In the memory of his parents **Late Smt. Rajeshwari & Late Shri P. V. Gunishastri** , Past President, H.W.T.*

# ಸಂಕ್ಷಿಪ್ತ ಸುದ್ದಿಗಳು

## Dombivli : Feb. 19th Satyanarayan Pooja

This is to convey with great pleasure that the 28th Annual Satyanarayana Pooja of Dombivli for the year 2016-2017 is to be held on Sunday 19th February, 2017 :

**Venue : Rotary Club Hall,** Raghuveer Nagar, Opp: Madhav Ashram Hall, Manapada Cross Road, Dombivli (East) - 421201.

All the Havyakas are requested to attend the function positively with family and friends and make it a grand success. Besides the Satyanarayana Pooja, the additional activities during this get-together functions are as follows:

**A) Morning 9:00 AM to 10:00 AM :**
**Drawing Competition for Children.**

| | | |
|---|---|---|
| Junior Group | : | Upto 2nd Standard. |
| Intermediate Group | : | From 3rd Std. to 6th Std. |
| Senior Group | : | 7th Std. to 10th Std. |

**B) Morning 10:30 AM to 11:30 AM :**
**Rangoli Competition for All.**

The Mahamangalarathi to Lord Satyanarayana will be held at 12:30 PM. followed by Prasada vitarana and Prasada Bhojana.

In the afternoon, there will be Prayer, Welcome speech, introduction of Chief Guest, speech by the chief guest, and vote of thanks. Apart from this there is entertainment programme like Fancy dress, Singing and Dancing, etc. from the children and youths, prize distribution and finally tea distribution to the assembled.

Dear Havyka friends, as you know this is a get together function for all of us and involves an expenditure as well. Therefore, it is proposed to collect an amount of Rs 400/- per family. We welcome sponsorship, item-wise and it is hoped that people will take this as a honour. (Except the Pooja activities). Please do attend, Participate and Enjoy.

**Satyanarayana Pooja Co-Ordination Committee**

## ಸ್ವರ್ಣವಲ್ಲಿ ಸೇವಾ ಸಮಿತಿ, ಮುಂಬಯಿ

ಪರಮಪೂಜ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳ ಸವಾರಿಯು ಮುಂಬಯಿಗೆ ಭೇಟಿ ನೀಡಲಿದ್ದು, ಮಾರ್ಚ್ 4,2017ರಿಂದ ಮಾರ್ಚ್ 11,2017ರವರೆಗೆ ಮಾಟುಂಗಾದ ಶಂಕರ ಮಠದಲ್ಲಿ ವಾಸ್ತವ್ಯ ಹೂಡಲಿದೆ. ಈ ಸಂದರ್ಭದಲ್ಲಿ ಭಕ್ತಾದಿಗಳಿಗೆ ಪಾದಪೂಜೆ, ಭಿಕ್ಷಾ ಸೇವೆಗಳನ್ನು ಕೈಗೊಳ್ಳುವ ಅವಕಾಶಗಳಿವೆ. ಪ್ರತಿದಿನ ಸಂಜೆ ಪ್ರವಚನ ಕೂಡ ನಡೆಯಲಿದೆ. ಭಕ್ತಾದಿಗಳು ಈ ಸುಸಂದರ್ಭದ ಸದುಪಯೋಗ ಪಡಿಸಿಕೊಳ್ಳಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವ್ಯಕ್ತಿಗಳನ್ನು ಸಂಪರ್ಕಿಸಬಹುದು.

| | |
|---|---|
| ಶ್ರೀ ವಿ. ಎನ್. ಹೆಗಡೆ, ಕಲ್ವಾ | - 9869007333 |
| ಶ್ರೀ ಸುರೇಶ್ ಹೆಗಡೆ, ಥಾಣೆ | - 9833910140 |
| ಶ್ರೀ ಕೆ. ಸಿ. ಹೆಗಡೆ, ಬೊರಿವಲಿ | - 9869074115 |
| ಶ್ರೀ ವಸಂತ ಭಟ್, ಥಾಣೆ | - 9867307715 |

## ಪ್ರಥಮ ಸ್ಥಾನ – ಬಂಗಾರದ ಪದಕ



ಪರಮೇಶ್ವರ ಗಣಪತಿ ಹೆಗಡೆ ಫಲ, ಮುಡಾರೆ ಹೊಸಕುಳಿ ಹೊನ್ನಾವರ ಈತನು ಧಾರವಾಡದ ಎಸ್. ಡಿ. ಎಂ. ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಕಾಲೇಜಿನಲ್ಲಿ 2012-16 ರ ಇಂಜಿನಿಯರಿಂಗ್ ಪದವಿ ಪರೀಕ್ಷೆಯಲ್ಲಿ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವಿಭಾಗದಲ್ಲಿ CGPA:9.49 out of 10 ಅಂಕಗಳನ್ನು ಪಡೆದು ಬಂಗಾರ ಪದಕ ಸಹಿತ ಪ್ರಥಮ ಸ್ಥಾನ ಪಡೆದಿರುತ್ತಾನೆ. ದಿನಾಂಕ 18.6.2016ರಂದು ಕಾಲೇಜಿನಲ್ಲಿ ನಡೆದ ಸಮಾರಂಭದಲ್ಲಿ ಪದ್ಮವಿಭೂಷಣ ಡಾ. ಡಿ. ವೀರೇಂದ್ರ ಹೆಗ್ಗಡೆ, ಧರ್ಮಸ್ಥಳ ಧರ್ಮಾಧಿಕಾರಿ, ಇವರ ಉಪಸ್ಥಿತಿಯಲ್ಲಿ ಬಂಗಾರ ಪದಕದೊಂದಿಗೆ ಪ್ರಮಾಣ ಪತ್ರ ನೀಡಿ ಗೌರವಿಸಲ್ಪಟ್ಟಿದ್ದಾನೆ. ಮೂಲತಃ ಹೊನ್ನಾವರ ತಾಲೂಕಿನ ಹೊಸಾಕುಳಿ ಗ್ರಾಮದ ಮುಡಾರೆಯವನಾಗಿದ್ದು ಈತನು ಗೌರವಾನ್ವಿತ ಮನೆತನದ ಪ್ರಸಿದ್ಧ ಫಲ ಜ್ಯೋತಿಷಿಗಳಾಗಿದ್ದ ದಿ. ಪರಮಯ್ಯ ಹೆಗಡೆ, ಫಲ ಮುಡಾರೆ ಇವರ ಮೊಮ್ಮಗ, ಅಜ್ಜ ಜ್ಯೋತಿಷ್ಯ ಶಾಸ್ತ್ರದಲ್ಲಿ ಪ್ರಾವೀಣ್ಯತೆಯನ್ನು ಪಡೆದವರಾಗಿದ್ದಾರೆ. ತಂದೆ ಗಣಪತಿ ಹೆಗಡೆ ತಾಯಿ ಸುಮಿತ್ರಾ ಗೃಹಿಣಿಯಾಗಿದ್ದಾಳೆ.

ಇವರು ಪ್ರಾಥಮಿಕ ಶಿಕ್ಷಣವನ್ನು ಶ್ರೀ ಕರಿಕಾನ ಪರಮೇಶ್ವರಿ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಶಾಲೆ, ಅರೇ ಅಂಗಡಿಯಲ್ಲಿ ಪಡೆದು ಹೊನ್ನಾವರದ ನ್ಯೂ ಇಂಗ್ಲಿಷ್ ಆಂಗ್ಲ ಮಾಧ್ಯಮ ಶಾಲೆ ಹಾಗೂ ಎಸ್. ಡಿ. ಎಂ. ಕಾಲೇಜಿನ ಪೂರ್ವ ವಿದ್ಯಾರ್ಥಿಯಾಗಿದ್ದು ಸದ್ಯ ಬೆಂಗಳೂರಿನ 'Informatica' ಸಾಫ್ಟ್‌ವೇರ್ ಕಂಪನಿಯಲ್ಲಿ Associate Software Engineer ಆಗಿ ಕಾರ್ಯ ನಿರ್ವಹಿಸುತ್ತಿದ್ದಾನೆ.

ಹವ್ಯಕ ವೆಲ್ಫೇರ್ ಟ್ರಸ್ಟ್ ಮುಂಬಯಿಯ ಮಹಿಳಾ ವಿಭಾಗದಿಂದ ಶಿಷ್ಯವೇತನವನ್ನು ಪಡೆದಿದ್ದನ್ನು ಸ್ಮರಿಸಿಕೊಳ್ಳುತ್ತಾ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಹಾಯ ನೀಡ ಬಯಸುವ ಉನ್ನತ ವಿಚಾರವನ್ನೂ ಹೊಂದಿದ್ದಾನೆ.

***ಇವರ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಕೆ.***

*PAGE DONATED BY : **SMT. TRIVENI BHATSHIKAR & SHRI R. T. BHATSHIKAR,** GHATKOPAR IN THE MEMORY OF **LATE SHRI T. R. BHATSHIKAR***

'Havyaka Sandesha' February 2017

**RNI NO. MAHBIL / 2000 / 746,**
**Postal R.NO. MCN/161/2015-2017**
**WPP License No. MR / Tech / WPP-130 / North / 2017**
**'Licence to post without prepayment'**

*Posted at Mumbai Patrika Channel Stg. Office Mumbai - 400 001*
Date of Publication : 1st of every month
REGISTERED NEWSPAPER
Date of Posting : 2nd, 3rd of every month

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. & 2665 2591
**E-mail : havyakamumbai@hotmail.com**
**Visit : www.havyakamumbai.com**

To,

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

## ಸನ್ಮಾನ



ಹಿರಿಯ ಪತ್ರಕರ್ತ, ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ) ಬೆಂಗಳೂರು ಇದರ ಮಾಜಿ ನಿರ್ದೇಶಕರೂ ಆದ ಶ್ರೀ ಸದಾನಂದ ಹೆಗಡೆಕಟ್ಟೆ ಅವರನ್ನು ಜನವರಿ 7, 2017ರಂದು ಗುರುಪುರದಲ್ಲಿ ಜರಗಿದ ಮಂಗಳೂರು ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷೆ ಖ್ಯಾತ ಲೇಖಕಿ, ಶ್ರೀಮತಿ ಚಂದ್ರಕಲಾ ನಂದಾವರ ಸನ್ಮಾನಿಸಿದರು.

## ಹಳದಿ ಕುಂಕುಮ



ಡೊಂಬಿವಲಿ ಹವ್ಯಕ ಮಹಿಳೆಯರು ಸಂಕ್ರಾಂತಿಯ ಹಳದಿ ಕುಂಕುಮ ಕಾರ್ಯಕ್ರಮವನ್ನು ಡೊಂಬಿವಲಿ ಮೆಡಿಕಲ್ ಸೆಂಟರ್‌ನಲ್ಲಿ ಸಂಭ್ರಮದಿಂದ ಆಚರಿಸಿದರು.



## ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿ ಮಾಧವಿ ಭಂಡಾರಿ

ಉಡುಪಿ : ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಜನವರಿ 7, 2017ರಂದು ನಡೆದ 10ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತಿ ಡಾ. ಮಾಧವಿ ಎಸ್. ಭಂಡಾರಿ ಅಧ್ಯಕ್ಷತೆ ವಹಿಸಿದ್ದರು.

✤ ✤ ✤

## ಓಂಕಾರ

**– ಶ್ರೀಮತಿ ಸರಸ್ವತಿ ಪಿ. ಭಟ್ಟ, ಕಡತೋಕ**

ನಸುಕಿನಲಿ ಮೊಳಗಿಹುದು ಶಂಖದಾ ಧ್ವನಿಯು
ಹೊಸ ದಿನದ ಆಗಮನಕಾಗಿಹುದು ನಾಂದಿಯು
ಮುಸುಕಿದಾ ಕತ್ತಲೆಯ ಕೊನೆಯ ಸೂಚನೆಯು
ನಸು ನಗುವ ರವಿಗದುವೇ ಸ್ವಾಗತದ ಕರೆಯು

ಶಂಖಧ್ವನಿಯೊಳಗಿರುವ ನಾದ ಓಂಕಾರ
ಸೃಷ್ಟಿಯಾರಂಭದಾ ಮೊದಲ ಆಧಾರ
ಆಕಾಶ ತತ್ವಕ್ಕೆ ಗುಣಶಬ್ದ ಸಾರ
ಮೊದಲ ಶಬ್ದದ ಅಭಿವ್ಯಕ್ತಿಯೋಂಕಾರ

ಸಂಧ್ಯೆಯಾ ಧ್ವನಿ ದಿನದ ಕೊನೆಯ ಸೂಚನೆಯು
ದಿನಕರನ ನಿರ್ಗಮನಕದು ಬೀಳ್ಕೊಡುಗೆಯು
ಮನದೊಳಗದೇನೋ ವಿಷಾದದನಿಸಿಕೆಯು
ಅರಿವ ಮರೆಸುತಲಾವರಿಸುವುದು ನಿದ್ರೆಯು

ಸೃಷ್ಟಿಯಾರಂಭವದು ಕಲ್ಪದಾದಿಯಲಿ
ಅಂತ್ಯವಾಗುವುದು ಮಹಾ ಪ್ರಳಯದಲ್ಲಿ
ಉದಯವೇ ಸೃಷ್ಟಿ ದಿನ ಸ್ಥಿತಿ ರಾತ್ರಿ ಲಯವು
ಸೃಷ್ಟಿ ಸ್ಥಿತಿ ಲಯಗಳೇ ಪ್ರಕೃತಿಯಾ ಗುಣವು ★

PAGE DONATED BY : **K.C & CO., SHRI K.C.HEGDE, BORIVLI, ONIKERI (BENGLE) & FAMILY**